# 2019ರ ಕರ್ನಾಟಕ ಅಧಿನಿಯಮ ಸಂಖ್ಯೆ: 01
# ಕರ್ನಾಟಕ ಸಿವಿಲ್ ಸೇವೆಗಳ (ನೇಮಕಾತಿಯ ಸಮಯದಲ್ಲಿ ಅಭ್ಯರ್ಥಿಗಳ ಆಯ್ಕೆಯ ಕಾರ್ಯವಿಧಾನ) ಅಧಿನಿಯಮ, 2018

## ಪ್ರಕರಣಗಳ ಪಟ್ಟಿ

**ಪ್ರಕರಣಗಳು:**


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಸ್ಪರ್ಧಾತ್ಮಕ ಮುಖ್ಯ ಪರೀಕ್ಷೆ, ಪೂರ್ವಭಾವಿ ಪರೀಕ್ಷೆ, ಅಂತಿಮ ಆಯ್ಕೆ ಪಟ್ಟಿ ಮತ್ತು ಹೆಚ್ಚುವರಿ ಪಟ್ಟಿಗಳಿಗಾಗಿ ಅಭ್ಯರ್ಥಿಗಳ ಆಯ್ಕೆಯ ಕಾರ್ಯವಿಧಾನ
3. ಕೈಗೊಂಡ ಕ್ರಮದ ಸಿಂಧುತ್ವ


## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2019ರ ಅಧಿನಿಯಮ ಸಂಖ್ಯೆ 01.–** ರಾಜ್ಯದ ಸಿವಿಲ್ ಸೇವೆಗಳ ಅಡಿಯಲ್ಲಿನ ಯಾವುದೇ ಸೇವೆಗೆ ಅಥವಾ ಹುದ್ದೆಗೆ ಅಭ್ಯರ್ಥಿಗಳ ನೇಮಕಾತಿಗಾಗಿ ಆಯ್ಕೆಯ ಕಾರ್ಯವಿಧಾನಕ್ಕೆ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಗೆಜೆಟೆಡ್ ಪ್ರೊಬೇಷನರುಗಳ ಸಂಬಂಧದಲ್ಲಿ ಕರ್ನಾಟಕ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಯ ನೇಮಕಾತಿ) ನಿಯಮಗಳು, 1997ರಲ್ಲಿ ಮತ್ತು ಗ್ರೂಪ್ 'ಎ' 'ಬಿ' 'ಸಿ' ಮತ್ತು 'ಡಿ' ಹುದ್ದೆಗಳ ಸಂಬಂಧದಲ್ಲಿ ರಾಜ್ಯ ಸರ್ಕಾರವು ಯಾವುದೇ ವಿಶೇಷ ಅಥವಾ ಸಾಮಾನ್ಯ ನೇಮಕಾತಿ ವಿಧಾನವನ್ನು ನಿಯಮಿಸಿರದ ಸೇವೆ ಅಥವಾ ಹುದ್ದೆಯ ಸಂಬಂಧದಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) ಸಾಮಾನ್ಯ ನಿಯಮಗಳು, 2006ರಲ್ಲಿ ನಿಯಮಿಸಲಾದಂತೆ ಆಯ್ಕೆ ಕಾರ್ಯವಿಧಾನವನ್ನು ಆಯ್ಕೆ ಪ್ರಾಧಿಕಾರಗಳು ಮತ್ತು ನೇಮಕಾತಿ ಏಜೆನ್ಸಿಗಳು ಅನುಸರಿಸುತ್ತಿರುವುದರಿಂದ, ರಾಜ್ಯ ಸರ್ಕಾರವು ಅದರಲ್ಲಿ ನಿರ್ದಿಷ್ಟಪಡಿಸಿದ ಕಾರ್ಯವಿಧಾನದೊಂದಿಗೆ ವಿಶೇಷ ಅಥವಾ ಸಾಮಾನ್ಯ ನೇಮಕಾತಿ ನಿಯಮಗಳನ್ನು ರೂಪಿಸಿದ್ದು ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸುವುದಕ್ಕಾಗಿ ನೇಮಕಾತಿ ಏಜೆನ್ಸಿಗಳು ಅವುಗಳನ್ನು ಅನುಸರಿಸುತ್ತಿರುವುದರಿಂದ;

ಆಯ್ಕೆಗೆ ಅನ್ವಯವಾಗುವ ನಿಯಮಗಳಿಗನುಸಾರವಾಗಿ ಲಿಖಿತ ಸ್ಪರ್ಧಾತ್ಮಕ ಪರೀಕ್ಷೆ, ಮುಖ್ಯ ಪರೀಕ್ಷೆಗೆ ಅರ್ಹರಾಗಿರುವ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸುವುಕ್ಕೆ ಮತ್ತು ವ್ಯಕ್ತಿತ್ವ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸುವುದಕ್ಕೆ ಅಭ್ಯರ್ಥಿಗಳ ಆಯ್ಕೆಯ ಪ್ರಕ್ರಿಯೆಯಲ್ಲಿ ವಿವಿಧ ಅನುಪಾತಗಳನ್ನು ಅನುಸರಿಸುತ್ತಿರುವುದರಿಂದ;

ಈ ನಿಯಮಗಳಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಇತರ ಹಿಂದುಳಿದ ವರ್ಗಗಳು ಮತ್ತು ಇತರರಿಗೆ ಸೇರಿದ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸುವ ವಿಧಾನವನ್ನು ಎಲ್ಲಿಯೂ ನಿರ್ದಿಷ್ಟಪಡಿಸದಿರುವುದರಿಂದ;

ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 20 ಎಸ್‌ಬಿಸಿ 1994 ದಿನಾಂಕ 3ನೇ ಮೇ 1994 ಮತ್ತು ಸಿಆಸುಇ 08 ಎಸ್‌ಬಿಸಿ 1995 ದಿನಾಂಕ 20ನೇ ಜೂನ್ 1995ರಲ್ಲಿ ಅಂತಿಮ ಆಯ್ಕೆ ಪಟ್ಟಿ ಮತ್ತು ಹೆಚ್ಚುವರಿ ಪಟ್ಟಿಗಾಗಿ ಅರ್ಹರಿರುವ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಇತರ ಹಿಂದುಳಿದ ವರ್ಗಗಳು ಮತ್ತು ಇತರರ ಪಟ್ಟಿಯಂತೆ ಅರ್ಹ ಅಭ್ಯರ್ಥಿಗಳ ಆಯ್ಕೆ ವಿಧಾನವನ್ನು ನಿರ್ದಿಷ್ಟಪಡಿಸಿರುವುದರಿಂದ, ಮೇಲಿನ ವಿಧಾನವನ್ನು 3ನೇ ಮೇ 1994ರಿಂದ ಅನುಸರಿಸಲಾಗುತ್ತಿದೆ. ಸದರಿ ಆದೇಶದ ಉಪಬಂಧಗಳು ಈ ಮುಂದಿನಂತೆ ಇರುತ್ತದೆ:–

"(ಅ) ಸಂಬಂಧಿಸಿದ ಆಯ್ಕೆ ಪ್ರಾಧಿಕಾರವು ಎಲ್ಲಾ ಅರ್ಹ ಅರ್ಜಿದಾರರ ಕ್ರೋಢೀಕೃತ ಯಾದಿಯನ್ನು ಅವರು ಯಾವ ಜಾತಿ ಪಂಗಡ ವರ್ಗಗಳಿಗೆ ಸೇರಿದವರೆನ್ನುವುದನ್ನು ಪರಿಗಣಿಸದೆ ಕೇವಲ ಅವರ ಅರ್ಹತೆಯ ಆಧಾರದ ಮೇಲೆ ತಯಾರಿಸತಕ್ಕದ್ದು (ಇನ್ನು ಮುಂದೆ ಈ ಯಾದಿಯನ್ನು "ಮೊದಲನೇ ಯಾದಿ" ಎಂದು ಕರೆಯಲಾಗುವುದು.

(ಆ) ಆ ಬಳಿಕ ಆಯ್ಕೆ ಪ್ರಾಧಿಕಾರ ಸಾಮಾನ್ಯ ಅರ್ಹತೆಯ ಮೇರೆಗೆ (ಅಂದರೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸುವ ಹುದ್ದೆಗಳನ್ನು ಬಿಟ್ಟು ಇತರೆ ಹುದ್ದೆಗಳು) ತುಂಬ ಬೇಕಾದ ಹುದ್ದೆಗಳ ಸಂಖ್ಯೆಗೆ ಸಾಮಾನ್ಯವಾಗಿ ಮೊದಲನೇ ಯಾದಿಯಿಂದ ಅಭ್ಯರ್ಥಿಗಳ ಹೆಸರುಗಳನ್ನು ತೆಗೆದುಕೊಂಡು ಎರಡನೇ ಯಾದಿಯನ್ನು (ಇನ್ನು ಮುಂದೆ ಈ ಯಾದಿಯನ್ನು "ಎರಡನೇ ಯಾದಿ" ಯೆಂದು ಹೆಸರಿಸಲಾಗುವುದು) ಮೊದಲನೇ ಯಾದಿಯ ಮೊದಲನೇ ಹೆಸರಿನಿಂದ ಪ್ರಾರಂಭಿಸಿ ಅರ್ಹತೆಯ ಆಧಾರದ ಮೇಲೆ ತಯಾರಿಸತಕ್ಕದ್ದು.

(ಇ) ಆಯ್ಕೆ ಪ್ರಾಧಿಕಾರ ನಂತರ ಮೊದಲನೇ ಯಾದಿಯಿಂದ ಎರಡನೇ ಯಾದಿಯ ಭಾಗವನ್ನು ಹೊರತುಪಡಿಸಿ ಮೂರನೇ ಯಾದಿಯನ್ನು (ಇನ್ನು ಮುಂದೆ ಈ ಯಾದಿಯನ್ನು "ಮೂರನೇ ಯಾದಿ" ಯೆಂದು ಹೆಸರಿಸಲಾಗುವುದು) ಪರಿಶಿಷ್ಟ ಜಾತಿ/ಪರಿಶಿಷ್ಟ

ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಗುಂಪುಗಳಿಗೆ) ಸೇರಿದ ಅಭ್ಯರ್ಥಿಗಳ ಹೆಸರುಗಳನ್ನು ಒಳಗೊಂಡಂತೆ ಪ್ರತಿಯೊಂದು ವರ್ಗಕ್ಕೆ ಮೀಸಲಿಡಿಸಿರುವ ರಿಕ್ತ ಸ್ಥಾನಗಳಿಗೆ ಸಮಾನವಾಗಿ, ಮೊದಲನೇ ಯಾದಿಯಲ್ಲಿ ನಿಗದಿಪಡಿಸಿರುವ ಅರ್ಹತೆಗೆ ಅನುಕ್ರಮವಾಗಿ ತಯಾರಿಸತಕ್ಕದ್ದು.

(ಈ) ಆಯ್ಕೆ ಪ್ರಾಧಿಕಾರ ನಂತರ, ಪ್ರತಿಯೊಂದು ವರ್ಗದ ಹುದ್ದೆಗಳಿಗೂ ನೇಮಕಾತಿಗಾಗಿ ಆಯ್ಕೆ ಮಾಡಿರುವ ಅಭ್ಯರ್ಥಿಗಳ ಒಂದು ಅಂತಿಮ ಯಾದಿ (ಇದನ್ನು ಮುಖ್ಯ ಯಾದಿಯೆಂದು ಹೆಸರಿಸಬಹುದಾಗಿದೆ) ಯನ್ನು ಎರಡನೇ ಯಾದಿ ಮತ್ತು ಮೂರನೇ ಯಾದಿಯಲ್ಲಿ ಒಳಗೊಂಡಿರುವ ಅಭ್ಯರ್ಥಿಗಳ ಹೆಸರುಗಳನ್ನು ಅರ್ಹತೆಯ ಆಧಾರದ ಮೇಲೆ ಜೋಡಿಸಿ ತಯಾರಿಸತಕ್ಕದ್ದು.

(ಉ) ನೇಮಕಾತಿ ನಿಯಮಗಳನ್ವಯ ಎಲ್ಲಿ ಒಂದು ಹೆಚ್ಚುವರಿ ಪಟ್ಟಿಯನ್ನು ತಯಾರಿಸಬೇಕಾಗಿದೆಯೋ ಅಂಥೆಡೆಗಳಲ್ಲಿ ಆಯ್ಕೆ ಪ್ರಾಧಿಕಾರ ಈ ಹೆಚ್ಚುವರಿ ಪಟ್ಟಿಯನ್ನು ಮೇಲೆ (ಅ) (ಆ) (ಇ) ಮತ್ತು (ಈ) ಯಲ್ಲಿ ಕಾಣಿಸಿರುವ ಕ್ರಮವನ್ನು ಅನುಸರಿಸಿ, ಮುಖ್ಯ ಯಾದಿಯಲ್ಲಿ ಸೇರಿಸಿರುವ ಹೆಸರುಗಳನ್ನು ಹೊರತುಪಡಿಸಿ ಮೊದಲನೇ ಯಾದಿಯಲ್ಲಿರುವ ಇತರೆ ಹೆಸರುಗಳಿಂದ ತಯಾರಿಸತಕ್ಕದ್ದು.

ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಪಿಟಿಷನ್ ಸಂಖ್ಯೆ 27674/2012 ಸಿ/ಡಬ್ಲ್ಯು/41366/2012 ದಿನಾಂಕ 21.06.2016 ರಲ್ಲಿ ಖಲೀಲ್ ಅಹ್ಮದ್ ಕೆ.ಪಿ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು ಇದರಲ್ಲಿ ಈ ರೀತಿ ಹೇಳಲಾಗಿದೆ:–

“135. (ಎ) ಖಂಡದಲ್ಲಿ ಉಪಬಂಧಿಸಲಾದಂತೆ ಪರೀಕ್ಷಾ ಸ್ಕೀಮ್‌ನಲ್ಲಿ ಗಮನಿಸಬಹುದಾದಂತೆ ಮುಖ್ಯ ಪರೀಕ್ಷೆಗೆ ಪ್ರವೇಶ ನೀಡಬೇಕಾದ ಅಭ್ಯರ್ಥಿಗಳ ಸಂಖ್ಯೆಯು ಪೂರ್ವಭಾವಿ ಪರೀಕ್ಷೆಯಲ್ಲಿನ ನಿರ್ವಹಣೆಯ ಆಧಾರದ ಮೇಲೆ, ಮೆರಿಟ್ ಕ್ರಮಾನುಸಾರವಾಗಿ ನೇಮಕಾತಿಗಾಗಿ ಅಧಿಸೂಚಿಸಿದ ಖಾಲಿ ಸ್ಥಾನಗಳ 20ರಷ್ಟಿರತಕ್ಕದ್ದು ಮತ್ತು ಇದು ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಇತರ ಹಿಂದುಳಿದ ವರ್ಗಗಳು ಮತ್ತು ಇತರರು ಇದರಲ್ಲಿ ಪ್ರತಿಯೊಬ್ಬರ ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳ ತಕ್ಕಷ್ಟು ಸಂಖ್ಯೆಯಲ್ಲಿ ಅದೇ ಅನುಪಾತವನ್ನು ಸರಿಹೊಂದಿಸುವುದಕ್ಕೆ ಒಳಪಟ್ಟಿರತಕ್ಕದ್ದು. “ಅದೇ ಅನುಪಾತ” ಎಂದು ಬಳಕೆಯಾಗಿರುವ ಪದ ಎಂದರೆ, ಮುಖ್ಯ ಪರೀಕ್ಷೆಗೆ ಪ್ರವೇಶ ನೀಡಬೇಕಾದ ಅಭ್ಯರ್ಥಿಗಳ ಸಂಖ್ಯೆಯು ಅದೇ ಅನುಪಾತದಲ್ಲಿರತಕ್ಕದ್ದು ಎಂದರೆ, ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಹಿಂದುಳಿದ ವರ್ಗಗಳು ಮತ್ತು ಇತರರಿಗೆ ಸೇರಿದ ಒಬ್ಬೊಬ್ಬರು ಇದಕ್ಕೆ ಸೇರಿದ ಅಭ್ಯರ್ಥಿಗಳ ಸಂಖ್ಯೆಯು ಸದರಿ ಪ್ರವರ್ಗಕ್ಕೆ ಸೇರದಿರುವ ಅಭ್ಯರ್ಥಿಗಳ ಸಂಖ್ಯೆಗೆ ಸಮನಾಗಿರತಕ್ಕದ್ದು. ಅಭ್ಯರ್ಥಿಗಳ ತಕ್ಕಷ್ಟು ಸಂಖ್ಯೆ ಎಂಬ ಪದವನ್ನು ಬಳಸಲಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಲಿಖಿತ ಪರೀಕ್ಷೆಗೆ ಪ್ರವೇಶ ನೀಡಲಾದ ಮೀಸಲಾತಿ ಇಲ್ಲದ ಪ್ರವರ್ಗಕ್ಕೆ ಸೇರಿರುವ ಅಭ್ಯರ್ಥಿಗಳ ಸಂಖ್ಯೆ ಮತ್ತು ಮೀಸಲಾತಿಗೆ ಪ್ರವೇಶ ನೀಡತಕ್ಕ ಮೀಸಲಾತಿ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಗಳ ಸಂಖ್ಯೆಯು ಒಂದೇ ಆಗಿರತಕ್ಕದ್ದು. ಆದುದರಿಂದ ಎರಡು ಪಟ್ಟಿಗಳನ್ನು, ಎಂದರೆ, ಮೀಸಲಾತಿ ಇಲ್ಲದ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಗಳನ್ನು ತೋರಿಸುವ ಒಂದು ಪಟ್ಟಿ ಮತ್ತು ಮೀಸಲಾತಿ ಪ್ರವರ್ಗವನ್ನು ತೋರಿಸುವ ಎರಡನೇ ಪಟ್ಟಿಯನ್ನು ಸಿದ್ದಪಡಿಸಬೇಕಾಗುತ್ತದೆ. ಈ ಎರಡೂ ಪಟ್ಟಿಗಳನ್ನು ಸಿದ್ದಪಡಿಸುವಾಗ ಹೆಚ್ಚು ಮಟ್ಟದಲ್ಲಿರುವ (intense) ಮೆರಿಟ್ ಅನ್ನು ಪರಿಗಣಿಸಬೇಕಾಗಿಲ್ಲ. ಈ ಪಟ್ಟಿಗಳು ಲಿಖಿತ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾದ ಅಭ್ಯರ್ಥಿಗಳ ಪಟ್ಟಿಯಾಗಿರುತ್ತದೆ ಮತ್ತು ದಿನಾಂಕ 03.05.1994ರ ಸರ್ಕಾರದ ಆದೇಶದಲ್ಲಿ ಮೊದಲನೇ ಪಟ್ಟಿ ಎಂದು ಕರೆಯಲಾಗುವ ಮೆರಿಟ್ ಕ್ರಮಾನುಸಾರದಲ್ಲಿ ನೇಮಕಾತಿಗೆ ಯುಕ್ತವಾಗಿರುವ ಅಭ್ಯರ್ಥಿಗಳ ಪಟ್ಟಿಯಾಗಿರುವುದಿಲ್ಲ. ಹಾಗೆಯೇ, ಲಿಖಿತ ಪರೀಕ್ಷೆಯ ತರುವಾಯ ಸದರಿ ಯಶಸ್ವಿ ಅಭ್ಯರ್ಥಿಗಳನ್ನು ವ್ಯಕ್ತಿತ್ವ ಪರೀಕ್ಷೆಗೆ ಕರೆಯುವಾಗ ಕೂಡಾ, ಅದೇ ಕಾರ್ಯವಿಧಾನವನ್ನು ಅನುಸರಿಸಬೇಕಾಗುತ್ತದೆ ಎಂದರೆ 2 ಪಟ್ಟಿಗಳನ್ನು ಎಂದರೆ, ಮೆರಿಟ್ ಕ್ರಮಾನುಸಾರದಲ್ಲಿ, ಮೀಸಲಾತಿ ಇಲ್ಲದ ಅಭ್ಯರ್ಥಿಗಳ ಒಂದು ಪಟ್ಟಿ ಮತ್ತು ಮೀಸಲಾತಿ ಅಭ್ಯರ್ಥಿಗಳ ಒಂದು ಪಟ್ಟಿಯನ್ನು ಸಿದ್ದಪಡಿಸತಕ್ಕದ್ದು. ಈ ಎರಡು ಪಟ್ಟಿಗಳು ವ್ಯಕ್ತಿತ್ವ ಪರೀಕ್ಷೆಗಾಗಿ ಕರೆಯಬೇಕಾದ ಅರ್ಹ ಅಭ್ಯರ್ಥಿಗಳ ಪಟ್ಟಿಯಾಗಿರುತ್ತದೆ. ಇದು ನೇಮಕಾತಿಗೆ ಯುಕ್ತ ಅಭ್ಯರ್ಥಿಗಳ ಪಟ್ಟಿಯಾಗಿರುವುದಿಲ್ಲ. ವ್ಯಕ್ತಿತ್ವ ಪರೀಕ್ಷೆಯ ನಂತರವಷ್ಟೇ, ಲಿಖಿತ ಪರೀಕ್ಷೆಯಲ್ಲಿ ಮತ್ತು ವ್ಯಕ್ತಿತ್ವ ಪರೀಕ್ಷೆಯಲ್ಲಿ ಪ್ರತಿಯೊಬ್ಬ ಅಭ್ಯರ್ಥಿಯು ಪಡೆದ ಅಂಕಗಳನ್ನು ಕೂಡಿಕೊಂಡು ಮತ್ತು ಅವರ ಜಾತಿ, ಪಂಗಡ, ವರ್ಗಗಳನ್ನು ಗಣನೆಗೆ ತೆಗೆದುಕೊಳ್ಳದೆ ಅರ್ಹ ಅಭ್ಯರ್ಥಿಗಳ ಕ್ರೋಢೀಕೃತ ಪಟ್ಟಿಯನ್ನು ಸಿದ್ದಪಡಿಸಲಾಗುವುದು. ನಿಯಮ 11ರ ಅಡಿಯಲ್ಲಿರುವಂತೆ, ನಿಯಮ 11ರ ಪದಾವಳಿಗಳಿಂದ ಸ್ಪಷ್ಟವಾಗುವುದೇನೆಂದರೆ ಸದರಿ ಸರ್ಕಾರಿ ಆದೇಶವನ್ನು ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸುವ ಹಂತದಲ್ಲಿ ಮಾತ್ರ ಅನುಸರಿಸಬೇಕಾಗಿರುತ್ತದೆ. ಲಿಖಿತ ಪರೀಕ್ಷೆಗೆ ಅಭ್ಯರ್ಥಿಗಳಿಗೆ ಪ್ರವೇಶ ನೀಡುವ ಸಮಯದಲ್ಲಿ ಮತ್ತು ವ್ಯಕ್ತಿತ್ವ ಪರೀಕ್ಷೆಗೆ ಅಭ್ಯರ್ಥಿಗಳನ್ನು ಆಹ್ವಾನಿಸುವ ಸಮಯದಲ್ಲಿ ಮೀಸಲು ವರ್ಗಗಳಿಗೆ ಸೇರಿರುವ ಮತ್ತು ಮೀಸಲಿರಿಸದಿರುವ ವರ್ಗಕ್ಕೆ ಸೇರಿರುವ ವ್ಯಕ್ತಿಗಳ ಅನುಪಾತವು ಒಂದೇ ಇರತಕ್ಕದ್ದು. (ಎ) ಮತ್ತು (ಸಿ) ಖಂಡಗಳು ನಿರ್ದಿಷ್ಟವಾಗಿ "ಅದೇ ಅನುಪಾತ" ಎಂಬ ಪದವನ್ನು ಉಲ್ಲೇಖಿಸುತ್ತದೆ. ಆದ್ದರಿಂದ, ಆ ಹಂತದಲ್ಲಿ ಮೀಸಲಿರಿಸಿರುವ ವರ್ಗದ ಯಾವುದೇ ಯೋಗ್ಯ (meritorious) ಅಭ್ಯರ್ಥಿಯನ್ನು ಲಿಖಿತ ಪರೀಕ್ಷೆಗೆ ಅಥವಾ ವ್ಯಕ್ತತ್ವ ಪರೀಕ್ಷೆಗೆ ಮೀಸಲಿರಿಸದಿರುವ ವರ್ಗವಾಗಿ ಆಹ್ವಾನಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಈ ಸರ್ಕಾರಿ ಆದೇಶಗಳನ್ನು ತಪ್ಪಾಗಿ ಅನ್ವಯಿಸುವ ಮೂಲಕ ಈ ಎರಡು ಹಂತಗಳಲ್ಲಿ ಮೀಸಲಿರಿಸದಿರುವ ವರ್ಗದ ಯೋಗ್ಯರಾಗಿರುವ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಗೆ ಹಾಗೂ ವ್ಯಕ್ತಿತ್ವ ಪರೀಕ್ಷೆಗೆ ಆಹ್ವಾನಿಸುವ ಅವಕಾಶದಿಂದ ನಿರಾಕರಿಸಲಾಗಿದೆ. 1:20 ಮತ್ತು 1:5 ಅನುಪಾತದಲ್ಲಿ ಕೈಗೊಳ್ಳಲಾದ ವಿಧಾನವು ಲಿಖಿತ ಪರೀಕ್ಷೆಗೆ ಪ್ರವೇಶ ನೀಡಬೇಕಾದ ಹಾಗೂ ವ್ಯಕ್ತಿತ್ವ ಪರೀಕ್ಷೆಗೆ ಆಹ್ವಾನಿಸಬೇಕಾದ ಅಭ್ಯರ್ಥಿಗಳ ಪಟ್ಟಿಯನ್ನು ಹೇಗೆ ರೂಪಿಸಬೇಕೆಂಬ ಸ್ಪಷ್ಟ ಉಪಬಂಧದ ಹಿನ್ನಲೆಯಲ್ಲಿ 1997ರ ನಿಯಮಗಳನ್ನು ಕರ್ನಾಟಕ ಲೋಕಸೇವಾ ಆಯೋಗವು ಅರ್ಥೈಸಲಾಗಿರುವುದು ತಪ್ಪಾಗಿದ್ದು ಆದರೆ ಅದು ಹಾಗೆ ಉಪಬಂಧಿಸಿರುವುದಿಲ್ಲ. ಆದ್ದರಿಂದ ಲೋಪವು ಸ್ಪಷ್ಟವಾಗಿದೆ.

XX XX XX

167. ಮೀಸಲು ವರ್ಗಗಳಿಗೆ ಸೇರಿರುವ ಸದಸ್ಯರು ಮುಕ್ತ ಸ್ಪರ್ಧೆಯಲ್ಲಿ ಅವರ ಸ್ವಂತ ಮೆರಿಟ್‌ನ ಆಧಾರದ ಮೇಲೆ ಸಾಮಾನ್ಯ ಪಟ್ಟಿ/ಮೀಸಲಿರಿಸದಿರುವ ವರ್ಗದಲ್ಲಿ ಸೇರಿಕೊಳ್ಳಬೇಕಾಗಿರುವ ಮತ್ತು ಅನುಸೂಚಿತ ಜಾತಿಗೆ ಮೀಸಲಿರಿಸಿದ ಕೋಟಾದಲ್ಲಿ ಪರಿಗಣಿಸದಿರುವ ಹಕ್ಕನ್ನು ಹೊಂದಿರುವರೆಂಬ ತತ್ವವು ಈಗ ಹೆಚ್ಚಾಗಿ ಬೇರೂರಿದೆ. ಮುಕ್ತ ವರ್ಗದ ಅಭ್ಯರ್ಥಿಗಳಿಗಿಂತ ಹೆಚ್ಚು ಯೋಗ್ಯರೆಂದು ನಿರ್ಣಯಿಸಲಾದ ಮೀಸಲು ವರ್ಗದ ಅಭ್ಯರ್ಥಿಯು ನಿರ್ದಿಷ್ಟವಾದ ಸೇವೆ/ವೃಂದ/ಹುದ್ದೆಯನ್ನು ಆತನ ಆಯ್ಕೆ/ಆದ್ಯತೆಯನುಸಾರವಾಗಿ ಆರಿಸಿಕೊಳ್ಳಲು ಹಕ್ಕುಳ್ಳವನಾಗಿರುವನು ಮತ್ತು ಆತನಿಗೆ ಮೀಸಲು ವರ್ಗದಲ್ಲಿ ಆ ವರ್ಗದ ಕಡಿಮೆ ಯೋಗ್ಯತೆಯ ಅಭ್ಯರ್ಥಿಗೆ ಹೆಚ್ಚು ಪ್ರಾಮುಖ್ಯದ ಸೇವೆ/ವೃಂದ/ಹುದ್ದೆಯನ್ನು ಬಿಟ್ಟುಕೊಟ್ಟು ಕೆಳಮಟ್ಟದ ಹುದ್ದೆಗೆ ನೇಮಕಾತಿಯನ್ನು ಪಡೆಯಲು ನಿರ್ಬಂಧಿಸುವಂತಿಲ್ಲ.

xx xx xx

169. ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಸೇವಾ ಆಯೋಗವು 1998, 1999 ಮತ್ತು 2004ರ ತಂಡಗಳಲ್ಲಿ ಲಿಖಿತ ಪರೀಕ್ಷೆಗೆ ಪ್ರವೇಶ ನೀಡುವಲ್ಲಿ ಹಾಗೂ ವ್ಯಕ್ತಿತ್ವ ಪರೀಕ್ಷೆಗೆ ಆಹ್ವಾನಿಸುವಲ್ಲಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವಾಗ ದಿನಾಂಕ: 03.05.1994 ಮತ್ತು 20.06.1995ರ ಸರ್ಕಾರಿ ಆದೇಶಗಳಲ್ಲಿ ನಿಯಮಿಸಲಾದ ಕಾರ್ಯವಿಧಾನವನ್ನು ಅನುಸರಿಸಿದೆ. ಅದು ಕಾನೂನು ಬಾಹಿರವಾಗಿರುತ್ತದೆ. ಅದು ನಿಯಮಗಳಿಗೆ ವಿರುದ್ಧವಾಗಿರುತ್ತದೆ. ಸದರಿ ಸರ್ಕಾರಿ ಆದೇಶವನ್ನು ವ್ಯಕ್ತಿತ್ವ ಪರೀಕ್ಷೆಯು ಮುಗಿದ ನಂತರ ಮತ್ತು ನಿಯಮ 11ರ ಅಡಿಯಲ್ಲಿ ನೇಮಕಾತಿಗೆ ಅರ್ಹರಿರುವ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವ ಸಮಯದಲ್ಲಿ ಮಾತ್ರ ಅನ್ವಯಿಸಬೇಕಾಗಿರುತ್ತದೆ. ಹೀಗಾಗಿ ಒಪ್ಪಿಕೊಂಡಿರುವಂತೆ ನಿಯಮಗಳಲ್ಲಿ ನಿಯಮಿಸಲಾದ ಅನುಪಾತವನ್ನು ಅನುಸರಿಸಲಾಗಿಲ್ಲ. ಪರಿಣಾಮದ ಸನ್ನಿವೇಶವು ಮೀಸಲಿರಿಸದಿರುವ ವರ್ಗದಿಂದ ಬರುವ ಯೋಗ್ಯರಾದ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಯನ್ನು ತೆಗೆದುಕೊಳ್ಳುವ ಅವಕಾಶದಿಂದ ನಿರಾಕರಿಸಲಾಗಿದೆ ಹಾಗೂ ವ್ಯಕ್ತಿತ್ವ ಪರೀಕ್ಷೆಗೆ ಆಹ್ವಾನಿಸುವುದರಿಂದಲೂ ಸಹ ನಿರಾಕರಿಸಲಾಗಿದೆ. ಇದು ಸಂವಿಧಾನದ ಅನುಚ್ಛೇದ 14 ಮತ್ತು 16(1)ರ ಉಲ್ಲಂಘನೆಯಾಗುವುದು. ಇದು, ಮೇಲೆ ಉಲ್ಲೇಖಿಸಿರುವ ಸರ್ಕಾರದ ಆದೇಶ ಮತ್ತು ನಿಯಮಗಳನ್ನು ಸಹ ಉಲ್ಲಂಘಿಸಿದಂತಾಗಿದೆ, ಆದುದರಿಂದ ಲಿಖಿತ ಪರೀಕ್ಷೆಗೆ ಪ್ರವೇಶಿಸಿದ ಅಭ್ಯರ್ಥಿಗಳ ಪಟ್ಟಿಯನ್ನು ಹಾಗೂ ವ್ಯಕ್ತಿತ್ವ ಪರೀಕ್ಷೆಗೆ ಆಹ್ವಾನಿಸುವ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವಾಗ ಕರ್ನಾಟಕ ಲೋಕಸೇವಾ ಆಯೋಗವು ಅನುಸರಿಸಿದ ಕಾರ್ಯವಿಧಾನವು ಅಸಂವಿಧಾನಿಕ ಮತ್ತು ಮೇಲೆ ಉಲ್ಲೇಖಿಸಿದ ಸರ್ಕಾರಿ ಆದೇಶ ಮತ್ತು ನಿಯಮಗಳಿಗೆ ವಿರುದ್ಧವಾಗಿದೆ ಎಂದು ಹೇಳುವಲ್ಲಿ ನಮಗೆ ಯಾವುದೇ ಸಂಕೋಚವಿರುವುದಿಲ್ಲ.

xx xx xx

164. (2010) 7 ಎಸ್‌ಸಿಸಿ 234ರಲ್ಲಿ ದಾಖಲಿಸಿದ ಭಾರತ ಒಕ್ಕೂಟ ಎಂ. ರಮೇಶ್ ರಾಮ್ ಮತ್ತು ಇತರರು ಪ್ರಕರಣದಲ್ಲಿ, ಹೆಚ್ಚು ಯೋಗ್ಯರಾದ ಮೀಸಲು ಅಭ್ಯರ್ಥಿಗಳು ಸಾಮಾನ್ಯ ವರ್ಗದಿಂದ ಮೀಸಲು ವರ್ಗಕ್ಕೆ ಸ್ಥಳಾಂತರಿಸುವ ಪ್ರಶ್ನೆಯನ್ನು ವ್ಯವಹರಿಸುವ ಅಪೆಕ್ಸ್ ನ್ಯಾಯಾಲಯದ ಸಂವಿಧಾನಿಕ ಪೀಠವು ಈ ಕೆಳಗಿನಂತೆ ಆದೇಶಿಸಿದೆ.

"72. ನಮ್ಮ ಉತ್ತರಗಳ ಒಟ್ಟು ತಾತ್ಪರ್ಯ:

i) ನಿಯಮ 16(2)ರ ಪ್ರಯೋಜನವನ್ನು ಪಡೆಯುವ ಮತ್ತು ಮೀಸಲು ವರ್ಗದಲ್ಲಿ ಹೊಂದಾಣಿಕೆ ಮಾಡಲಾದ ಎಂಆರ್‌ಸಿ ಅಭ್ಯರ್ಥಿಗಳು ಸರಾಸರಿ ಮೀಸಲಾತಿ ಕೋಟಾಗಳಲ್ಲಿ ಲೆಕ್ಕಹಾಕುವ ಉದ್ದೇಶಕ್ಕಾಗಿ ಮೀಸಲು ವರ್ಗದ ಭಾಗವಾಗಿ ಪರಿಗಣಿಸತಕ್ಕದ್ದು. ಸಾಮಾನ್ಯ ವರ್ಗದಲ್ಲಿ ಎಂಆರ್‌ಸಿ ಅಭ್ಯರ್ಥಿಗಳು ಖಾಲಿ ಮಾಡಿದ ಸೀಟುಗಳನ್ನು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ನೀಡಬೇಕಾಗುವುದು.

ii) ನಿಯಮ 16(2)ನ್ನು ನಿರ್ವಹಿಸುವಾಗ, ಎಂಆರ್‌ಸಿ ಅಭ್ಯರ್ಥಿಯ ಮೀಸಲು ಸ್ಥಿತಿಯನ್ನು ರಕ್ಷಿಸಲಾಗಿವುದರಿಂದ ಆತನ/ಅವಳ ಉತ್ತಮ ಸಾಧನೆಯು ಹೆಚ್ಚಿನ ಆದ್ಯತಾ ಸೇವೆಗೆ ಹಂಚಬೇಕಾದ ಅವಕಾಶದಿಂದ ಆತನನ್ನು ನಿರಾಕರಿಸುವಂತಾಗುವುದಿಲ್ಲ.

iii) ನಿಯಮ 16(2)ರ ತಿದ್ದುಪಡಿಯು ಎರಡು ವರ್ಗಗಳ ಅಭ್ಯರ್ಥಿಗಳ ಪರಸ್ಪರ ಮೆರಿಟ್ ಅನ್ನು ಮಾತ್ರ ಪರಿಗಣಿಸುವುದಾಗಿರುತ್ತದೆ. ಅಂದರೆ ಅವರು ನಮೂದಿಸಿದ ಆದ್ಯತೆಗಳನ್ನು ಪರಿಗಣಿಸಿ ಹಲವಾರು ಸಿವಿಲ್ ಸೇವೆಗಳಿಗೆ ಹಂಚಿಕೆಯ ಉದ್ದೇಶಕ್ಕಾಗಿ (ಎ) ಹೆಚ್ಚು ಯೋಗ್ಯವಾದ ಮೀಸಲು ವರ್ಗದ ಅಭ್ಯರ್ಥಿಗಳು (ಬಿ) ಸಂಬಂಧಿತ ಮೀಸಲು ವರ್ಗದ ಕೆಳ ಶ್ರೇಯಾಂಕದ ಅಭ್ಯರ್ಥಿಗಳು

iv) ಯೋಗ್ಯತೆಯನುಸಾರ ಆಯ್ಕೆ ಮಾಡಲಾದ ಮತ್ತು ಸಾಮಾನ್ಯ/ಮೀಸಲಿರಿಸದಿರುವ ವರ್ಗದ ಅಭ್ಯರ್ಥಿಗಳ ಪಟ್ಟಿಯಲ್ಲಿ ಸ್ಥಾನ ಪಡೆದ "ಹಿಂದುಳಿದ ವರ್ಗಗಳು, ಅನುಸೂಚಿತ ಜಾತಿ ಅನುಸೂಚಿತ ಪಂಗಡದ ವರ್ಗಗಳಿಗೆ ಸೇರಿರುವ" ಮೀಸಲು ವರ್ಗದ ಅಭ್ಯರ್ಥಿಗಳು ಸೇವೆಗಳ ಹಂಚಿಕೆಯ ಸಮಯದಲ್ಲಿ ಸಂಬಂಧಪಟ್ಟ ಮೀಸಲು ವರ್ಗಕ್ಕೆ ಸ್ಥಳಾಂತರಗೊಳ್ಳಲು ಆಯ್ಕೆ ಮಾಡಿಕೊಳ್ಳಬೇಕಾಗುವುದು. ನಿಯಮ 16(2)ರಲ್ಲಿ ಗಮನಿಸಿದ ಅಂಥ ಸ್ಥಳಾಂತರವು ನಿಯಮ 16(1) ರೊಂದಿಗೆ ಅಥವಾ ಸಂವಿಧಾನದ ಅನುಚ್ಛೇದ 14, 16(4) ಮತ್ತು 334ರೊಂದಿಗೆ ಅಸಂಗತವಾಗುವುದಿಲ್ಲ.

xx xx xx

# ಆದೇಶ

(1) 1998, 1999 ಮತ್ತು 2004ರಲ್ಲಿ ಗೆಜೆಟೆಡ್ ಪ್ರೊಬೇಷನರುಗಳ (ಗ್ರೂಪ್ ಎ ಮತ್ತು ಬಿ ಹುದ್ದೆಗಳು) ಲಿಖಿತ ಪರೀಕ್ಷೆಗೆ ಪ್ರವೇಶ ಪಡೆದ ಅಭ್ಯರ್ಥಿಗಳ ಪಟ್ಟಿಯನ್ನು ಮತ್ತು ವ್ಯಕ್ತಿತ್ವ ಪರೀಕ್ಷೆಗೆ ಆಹ್ವಾನಿಸಲಾದ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ಅನುಸರಿಸಿದ ಕಾರ್ಯವಿಧಾನವು ಅಸಂವಿಧಾನಿಕವಾಗಿದ್ದು, ಸರ್ಕಾರಿ ಆದೇಶಗಳು ಮತ್ತು ನಿಯಮಗಳಿಗೆ ವಿರುದ್ಧವಾಗಿದೆ.

ಆದಾಗ್ಯೂ, ಈ ಆಧಾರದ ಮೇಲೆ 1998, 1999 ಮತ್ತು 2004ರ ಬ್ಯಾಚುಗಳ ಒಟ್ಟಾರೆ ಆಯ್ಕೆಯನ್ನು ತಳ್ಳಿಹಾಕುವಂತಿಲ್ಲ.

ದೋಷಪೂರಿತ/ಅನರ್ಹ ಅಭ್ಯರ್ಥಿಗಳನ್ನು ಪ್ರತ್ಯೇಖವಾಗಿಸುವುದು ಸಾಧ್ಯವಿದೆ. ಕರ್ನಾಟಕ ಲೋಕಸೇವಾ ಆಯೋಗವು ಅನರ್ಹ ಅಭ್ಯರ್ಥಿಗಳನ್ನು ಪ್ರತ್ಯೇಖಿಸಲು ಈ ಮುಂದಿನ ಕ್ರಮವನ್ನು ಕೈಗೊಳ್ಳತಕ್ಕದ್ದು;

(ಎ) ಕರ್ನಾಟಕ ಲೋಕಸೇವಾ ಆಯೋಗವು ಲಿಖಿತ ಪರೀಕ್ಷೆಯನ್ನು ತೆಗೆದುಕೊಂಡ ಮೀಸಲು ವರ್ಗಕ್ಕೆ ಸೇರಿರುವ ಅಭ್ಯರ್ಥಿಗಳ ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೆರಿಟ್ ಕ್ರಮಾನುಸಾರವಾಗಿ ಪ್ರತ್ಯೇಕ ಪಟ್ಟಿಯನ್ನು ತಯಾರಿಸತಕ್ಕದ್ದು.

(ಬಿ) ಸಿದ್ದಪಡಿಸಲಾದ ಹೆಸರುಗಳ ಸದರಿ ಪಟ್ಟಿಯಿಂದ ವ್ಯಕ್ತಿತ್ವ ಪರೀಕ್ಷೆಗೆ ಆಹ್ವಾನಿಸಬೇಕಾದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು 1:5 ಅನುಪಾತದಲ್ಲಿ ಸಿದ್ದಪಡಿಸುವುದು, ಎಂದರೆ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಮೀಸಲು ಹುದ್ದೆಗಳ ಪೈಕಿ ಪ್ರತಿಯೊಂದು ವರ್ಗಕ್ಕಾಗಿ ಮೀಸಲಿರಿಸಿದ ಖಾಲಿ ಇರುವ ಸ್ಥಾನಗಳ ಸಂಖ್ಯೆಯ ಐದರಷ್ಟಂತೆ ಅಭ್ಯರ್ಥಿಗಳ ಸಂಖ್ಯೆಯು ಇರತಕ್ಕದ್ದು.

(ಸಿ) ಮೀಸಲು ವರ್ಗಕ್ಕೆ ಸೇರಿದ ಆಯ್ಕೆಯಾದ ಅಭ್ಯರ್ಥಿಗಳ ಹೆಸರುಗಳು ಸಾಮಾನ್ಯ ವರ್ಗವಾಗಿ ಅಥವಾ ಮೀಸಲು ವರ್ಗವಾಗಿ ಈ ಪಟ್ಟಿಯಲ್ಲಿ ಕಾಣಿಸಿಕೊಂಡರೆ, ಆಗ ಅವರ ನೇಮಕಾತಿಯು ಸಿಂಧುವಾಗಿರತಕ್ಕದ್ದು ಹಾಗೂ ಅದನ್ನು ಅಡ್ಡಿಗೊಳಿಸತಕ್ಕದ್ದಲ್ಲ.

(ಡಿ) ಆಯ್ಕೆಯಾದ ಅಭ್ಯರ್ಥಿಗಳ ಹೆಸರುಗಳು ಈ ಪಟ್ಟಿಯಲ್ಲಿ ಕಾಣಿಸಿಕೊಳ್ಳದಿದ್ದರೆ, ಆಗ ಅವರ ನೇಮಕಾತಿಯು ಅನೂರ್ಜಿತಗೊಳ್ಳುವುದು ಹಾಗೂ ಅದನ್ನು ಈ ಮೂಲಕ ತಳ್ಳಿ ಹಾಕುವುದು.

(ಇ) ಕರ್ನಾಟಕ ಲೋಕಸೇವಾ ಆಯೋಗವು ಈ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳುಗಳ ಒಳಗೆ ಈ ಕ್ರಮವನ್ನು ಕೈಗೊಳ್ಳತಕ್ಕದ್ದು ಹಾಗೂ ಅದನ್ನು ಸೂಕ್ತ ಆದೇಶಗಳನ್ನು ಹೊರಡಿಸಲು ಸರ್ಕಾರಕ್ಕೆ ಕಳುಹಿಸತಕ್ಕದ್ದು.

(2) ರಿಟ್ ಪಿಟಿಷನ್ ಸಂ: 12548-589/2002ರಲ್ಲಿನ 11ನೇ ಅಕ್ಟೋಬರ್ 2002 ದಿನಾಂಕದ ಆದೇಶದ ಮೂಲಕ ಕರ್ನಾಟಕ ಲೋಕಸೇವಾ ಆಯೋಗವು ತಯಾರಿಸಿದ ಪರಿಷ್ಕೃತ ಪಟ್ಟಿಯನ್ನು ಅಪೆಕ್ಸ್ ನ್ಯಾಯಾಲಯವು ಸಿವಿಲ್ ಅಪೀಲು ಸಂ: 6172-6222/2005ರಲ್ಲಿ 6ನೇ ಅಕ್ಟೋಬರ್ 2005 ದಿನಾಂಕದ ಆದೇಶದ ಮುಖೇನ ದೃಢೀಕರಿಸಿದೆ, ಅದನ್ನು ಕರ್ನಾಟಕ ಲೋಕಸೇವಾ ಆಯೋಗವು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿ ಈ ನ್ಯಾಯಾಲಯದ ದಿನಾಂಕ: 11.11.2014ರ ಆದೇಶದ ಕಾರಣದಿಂದಾಗಿ ಅದನ್ನು ಜಾಲತಾಣದಲ್ಲಿ ಪ್ರಕಟಿಸಲಾಗಿದ್ದು ಅದನ್ನು ಎತ್ತಿಹಿಡಿಯಲಾಗಿದೆ. ಕರ್ನಾಟಕ ಲೋಕಸೇವಾ ಆಯೋಗವು ಮತ್ತು ರಾಜ್ಯ ಸರ್ಕಾರವು ಸದರಿ ಪಟ್ಟಿಯನ್ನು ಜಾರಿಗೊಳಿಸತಕ್ಕದ್ದು.

ಮಾನ್ಯ ಸರ್ವೋಚ್ಛ ನ್ಯಾಯಾಲಯವು ಎಸ್ಎಲ್‌ಪಿ ಸಂ: 29245/2016ರ ಗೋಪಾಲಕೃಷ್ಣ ಎನ್ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು ಪ್ರಕರಣದಲ್ಲಿ ಮೇಲಿನ ಉಚ್ಛನ್ಯಾಯಾಲಯದ ತೀರ್ಪನ್ನು ಸರ್ವೋಚ್ಛ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ ದಿನಾಂಕ 11.04.2018ರಲ್ಲಿ ಈ ಮುಂದಿನಂತೆ ಹೇಳಲಾಗಿರುವುದರಿಂದ,-

"ವಕೀಲರ ಅಹವಾಲನ್ನು ಆಲಿಸಿದ ಮೇಲೆ ನ್ಯಾಯಾಲಯವು ಈ ಮುಂದಿನ
ಆದೇಶವನ್ನು ಮಾಡಿದೆ. ಪಕ್ಷಕಾರರ ಪರವಾಗಿನ ವಕೀಲರನ್ನು ಆಲಿಸಿದೆ.
ವಿಳಂಬವನ್ನು ಮನ್ನಿಸಿದೆ.
ಪ್ರಶ್ನಿತ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಆದಾರಗಳು ಕಂಡುಬರುವುದಿಲ್ಲ. ಅದರಂತೆ ವಿಶೇಷ ಅನುಮತಿ ಅರ್ಜಿಯನ್ನು ವಜಾಗೊಳಿಸಿದೆ.
ಯಾವುದೇ ಅರ್ಜಿ(ಗಳು) ಬಾಕಿಯಿದ್ದಲ್ಲಿ, ಅವುಗಳನ್ನೂ ಸಹ ವಿಲೇ ಮಾಡತಕ್ಕದ್ದು."

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಜಿತೇಂದ್ರ ಕುಮಾರ್ ಸಿಂಗ್ ಮತ್ತು ಎಎನ್ಆರ್ ವಿರುದ್ಧ ಉತ್ತರ ಪ್ರದೇಶ ರಾಜ್ಯ ಮತ್ತು ಇತರರು ಸಿ.ಎ ಸಂ: 74/2010ರಲ್ಲಿ 08.01.2010ರಲ್ಲಿ ಈ ಮುಂದಿನಂತೆ ಹೇಳಿರುವುದರಿಂದ,-

"52. ಮೇಲಿನ ಹಿನ್ನೆಲೆಯಲ್ಲಿ ಮೀಸಲು ವರ್ಗದ ಅಭ್ಯರ್ಥಿಗಳಿಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳೊಂದಿಗೆ ಸ್ಪರ್ಧಿಸಲು ವಯೋಮಿತಿ ಸಡಿಲಿಕೆಯೊಂದೇ ಸಾಧುವಾಗಿದ್ದು, ಉಳಿದೆಲ್ಲ ಅಂಶಗಳೂ ಸಮಾನವಾಗಿವೆ ಎಂಬುದು ಸಾಕಷ್ಟು ಸ್ಪಷ್ಟವಾಗುತ್ತಿದೆ. ರಾಜ್ಯವು ವಯಸ್ಸು ಮತ್ತು ಶುಲ್ಕದಲ್ಲಿನ ಸಡಿಲಿಕೆಯನ್ನು ಆಯ್ಕೆ ಪರೀಕ್ಷೆ ಅಂದರೆ, ಸಂದರ್ಶನದ ಜೊತೆಗಿರುವ ಮುಖ್ಯ ಲಿಖಿತ ಪರೀಕ್ಷೆಯಲ್ಲಿ, ಅಭ್ಯರ್ಥಿಯ ಮೆರಿಟ್‌ನ ಆಧಾರದ ಮೇಲೆ ಆಯ್ಕೆ ಮಾದರಿಯಲ್ಲಿನ ಸಡಿಲಿಕೆಯಂತೆ ಮಾಡಿರುವುದಿಲ್ಲ. ಆದ್ದರಿಂದ ಅಂಥ ಸಡಿಲಿಕೆಗಳು, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿನ ಯೋಗ್ಯತೆಯ ಆಧಾರದ ಮೇಲೆ ಮೀಸಲು ವರ್ಗದ ಅಭ್ಯರ್ಥಿಯು ಸಾಮಾನ್ಯ ವರ್ಗದ ಅಭ್ಯರ್ಥಿಯಾಗಿ ಪರಿಗಣಿಸಬೇಕಾದ ಹಕ್ಕಿನಿಂದ ವಂಚಿತನಾಗುವಂತಿಲ್ಲ."

ಮುಖ್ಯ ಸ್ಪರ್ಧಾತ್ಮಕ ಪರೀಕ್ಷೆ, ವ್ಯಕ್ತಿತ್ವ ಪರೀಕ್ಷೆ ಮತ್ತು ಅಂತಿಮ ಹಾಗೂ ಹೆಚ್ಚುವರಿ ಪಟ್ಟಿಗಳನ್ನು ಸಿದ್ದಪಡಿಸುವ ವಿಧಾನದ ಉದ್ದೇಶಕ್ಕಾಗಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ದಪಡಿಸಲು ಸ್ಪಷ್ಟೀಕರಣ ನೀಡುವುದು ಯುಕ್ತವಾಗಿರುವುದರಿಂದ;

ಆದ್ದರಿಂದ ಈ ವಿಧೇಯಕ

[2018ರ ವಿಧಾನಸಭೆಯ ವಿಧೇಯಕ ಸಂಖ್ಯೆ 14, ಕಡತ ಸಂಖ್ಯೆ:ಸಂವ್ಯಶಾಇ 30 ಶಾಸನ 2018]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 41ನೆಯ ನಮೂದನೆಯಡಿಯಲ್ಲಿ ಬರುತ್ತದೆ.]

# 2019ರ ಕರ್ನಾಟಕ ಅಧಿನಿಯಮ ಸಂಖ್ಯೆ: 01

(2019ರ ಜನವರಿ ತಿಂಗಳ ನಾಲ್ಕನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಸಿವಿಲ್ ಸೇವೆಗಳ (ನೇಮಕಾತಿಯ ಸಮಯದಲ್ಲಿ ಅಭ್ಯರ್ಥಿಗಳ ಆಯ್ಕೆಯ ಕಾರ್ಯವಿಧಾನ) ಅಧಿನಿಯಮ, 2018

(2019ರ ಜನವರಿ ತಿಂಗಳ ಮೂರನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ರಾಜ್ಯದ ಸಿವಿಲ್ ಸೇವೆಗಳ ಅಡಿಯಲ್ಲಿನ ಯಾವುದೇ ಸೇವೆಗೆ ಅಥವಾ ಹುದ್ದೆಗೆ ಅಭ್ಯರ್ಥಿಗಳ ನೇಮಕಾತಿಗಾಗಿ ಆಯ್ಕೆಯ ಕಾರ್ಯವಿಧಾನಕ್ಕೆ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಗೆಜೆಟೆಡ್ ಪ್ರೊಬೇಷನರುಗಳ ಸಂಬಂಧದಲ್ಲಿ ಕರ್ನಾಟಕ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಯ ನೇಮಕಾತಿ) ನಿಯಮಗಳು, 1997ರಲ್ಲಿ ಮತ್ತು ಗ್ರೂಪ್ 'ಎ' 'ಬಿ' 'ಸಿ' ಮತ್ತು 'ಡಿ' ಹುದ್ದೆಗಳ ಸಂಬಂಧದಲ್ಲಿ ರಾಜ್ಯ ಸರ್ಕಾರವು ಯಾವುದೇ ವಿಶೇಷ ಅಥವಾ ಸಾಮಾನ್ಯ ನೇಮಕಾತಿ ವಿಧಾನವನ್ನು ನಿಯಮಿಸಿರದ ಸೇವೆ ಅಥವಾ ಹುದ್ದೆಯ ಸಂಬಂಧದಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) ಸಾಮಾನ್ಯ ನಿಯಮಗಳು, 2006ರಲ್ಲಿ ನಿಯಮಿಸಲಾದಂತೆ ಆಯ್ಕೆ ಕಾರ್ಯವಿಧಾನವನ್ನು ಆಯ್ಕೆ ಪ್ರಾಧಿಕಾರಗಳು ಮತ್ತು ನೇಮಕಾತಿ ಏಜೆನ್ಸಿಗಳು ಅನುಸರಿಸುತ್ತಿರುವುದರಿಂದ, ರಾಜ್ಯ ಸರ್ಕಾರವು ಅದರಲ್ಲಿ ನಿರ್ದಿಷ್ಟಪಡಿಸಿದ ಕಾರ್ಯವಿಧಾನದೊಂದಿಗೆ ವಿಶೇಷ ಅಥವಾ ಸಾಮಾನ್ಯ ನೇಮಕಾತಿ ನಿಯಮಗಳನ್ನು ರೂಪಿಸಿದ್ದು ಆಯ್ಕೆ ಪಟ್ಟಿಯನ್ನು ಸಿದ್ದಪಡಿಸುವುದಕ್ಕಾಗಿ ನೇಮಕಾತಿ ಏಜೆನ್ಸಿಗಳು ಅವುಗಳನ್ನು ಅನುಸರಿಸುತ್ತಿರುವುದರಿಂದ;

ಆಯ್ಕೆಗೆ ಅನ್ವಯವಾಗುವ ನಿಯಮಗಳಿಗನುಸಾರವಾಗಿ ಲಿಖಿತ ಸ್ಪರ್ಧಾತ್ಮಕ ಪರೀಕ್ಷೆ, ಮುಖ್ಯ ಪರೀಕ್ಷೆಗೆ ಅರ್ಹರಾಗಿರುವ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ದಪಡಿಸುವುಕ್ಕೆ ಮತ್ತು ವ್ಯಕ್ತಿತ್ವ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ದಪಡಿಸುವುದಕ್ಕೆ ಅಭ್ಯರ್ಥಿಗಳ ಆಯ್ಕೆಯ ಪ್ರಕ್ರಿಯೆಯಲ್ಲಿ ವಿವಿಧ ಅನುಪಾತಗಳನ್ನು ಅನುಸರಿಸುತ್ತಿರುವುದರಿಂದ;

ಈ ನಿಯಮಗಳಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಇತರ ಹಿಂದುಳಿದ ವರ್ಗಗಳು ಮತ್ತು ಇತರರಿಗೆ ಸೇರಿದ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ದಪಡಿಸುವ ವಿಧಾನವನ್ನು ಎಲ್ಲಿಯೂ ನಿರ್ದಿಷ್ಟಪಡಿಸದಿರುವುದರಿಂದ;

ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 20 ಎಸ್‌ಬಿಸಿ 1994 ದಿನಾಂಕ 3ನೇ ಮೇ 1994 ಮತ್ತು ಸಿಆಸುಇ 08 ಎಸ್‌ಬಿಸಿ 1995 ದಿನಾಂಕ 20ನೇ ಜೂನ್ 1995ರಲ್ಲಿ ಅಂತಿಮ ಆಯ್ಕೆ ಪಟ್ಟಿ ಮತ್ತು ಹೆಚ್ಚುವರಿ ಪಟ್ಟಿಗಾಗಿ ಅರ್ಹರಿರುವ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಇತರ ಹಿಂದುಳಿದ ವರ್ಗಗಳು ಮತ್ತು ಇತರರ ಪಟ್ಟಿಯಂತೆ ಅರ್ಹ ಅಭ್ಯರ್ಥಿಗಳ ಆಯ್ಕೆ ವಿಧಾನವನ್ನು ನಿರ್ದಿಷ್ಟಪಡಿಸಿರುವುದರಿಂದ, ಮೇಲಿನ ವಿಧಾನವನ್ನು 3ನೇ ಮೇ 1994ರಿಂದ ಅನುಸರಿಸಲಾಗುತ್ತಿದೆ. ಸದರಿ ಆದೇಶದ ಉಪಬಂಧಗಳು ಈ ಮುಂದಿನಂತೆ ಇರುತ್ತದೆ:–

"(ಅ) ಸಂಬಂಧಿಸಿದ ಆಯ್ಕೆ ಪ್ರಾಧಿಕಾರವು ಎಲ್ಲಾ ಅರ್ಹ ಅರ್ಜಿದಾರರ ಕ್ರೋಢೀಕೃತ ಯಾದಿಯನ್ನು ಅವರು ಯಾವ ಜಾತಿ ಪಂಗಡ ವರ್ಗಗಳಿಗೆ ಸೇರಿದವರೆನ್ನುವುದನ್ನು ಪರಿಗಣಿಸದೆ ಕೇವಲ ಅವರ ಅರ್ಹತೆಯ ಆಧಾರದ ಮೇಲೆ ತಯಾರಿಸತಕ್ಕದ್ದು (ಇನ್ನು ಮುಂದೆ ಈ ಯಾದಿಯನ್ನು "ಮೊದಲನೇ ಯಾದಿ" ಎಂದು ಕರೆಯಲಾಗುವುದು.

(ಆ) ಆ ಬಳಿಕ ಆಯ್ಕೆ ಪ್ರಾಧಿಕಾರ ಸಾಮಾನ್ಯ ಅರ್ಹತೆಯ ಮೇರೆಗೆ (ಅಂದರೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸುವ ಹುದ್ದೆಗಳನ್ನು ಬಿಟ್ಟು ಇತರೆ ಹುದ್ದೆಗಳು) ತುಂಬ ಬೇಕಾದ ಹುದ್ದೆಗಳ ಸಂಖ್ಯೆಗೆ ಸಾಮಾನ್ಯವಾಗಿ ಮೊದಲನೇ ಯಾದಿಯಿಂದ ಅಭ್ಯರ್ಥಿಗಳ ಹೆಸರುಗಳನ್ನು

ತೆಗೆದುಕೊಂಡು ಎರಡನೇ ಯಾದಿಯನ್ನು (ಇನ್ನು ಮುಂದೆ ಈ ಯಾದಿಯನ್ನು "ಎರಡನೇ ಯಾದಿ" ಯೆಂದು ಹೆಸರಿಸಲಾಗುವುದು) ಮೊದಲನೇ ಯಾದಿಯ ಮೊದಲನೇ ಹೆಸರಿನಿಂದ ಪ್ರಾರಂಭಿಸಿ ಅರ್ಹತೆಯ ಆಧಾರದ ಮೇಲೆ ತಯಾರಿಸತಕ್ಕದ್ದು.

(ಇ) ಆಯ್ಕೆ ಪ್ರಾಧಿಕಾರ ನಂತರ ಮೊದಲನೇ ಯಾದಿಯಿಂದ ಎರಡನೇ ಯಾದಿಯ ಭಾಗವನ್ನು ಹೊರತುಪಡಿಸಿ ಮೂರನೇ ಯಾದಿಯನ್ನು (ಇನ್ನು ಮುಂದೆ ಈ ಯಾದಿಯನ್ನು "ಮೂರನೇ ಯಾದಿ" ಯೆಂದು ಹೆಸರಿಸಲಾಗುವುದು) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಗುಂಪುಗಳಿಗೆ) ಸೇರಿದ ಅಭ್ಯರ್ಥಿಗಳ ಹೆಸರುಗಳನ್ನು ಒಳಗೊಂಡಂತೆ ಪ್ರತಿಯೊಂದು ವರ್ಗಕ್ಕೆ ಮೀಸಲಿಡಿಸಿರುವ ರಿಕ್ತ ಸ್ಥಾನಗಳಿಗೆ ಸಮಾನವಾಗಿ, ಮೊದಲನೇ ಯಾದಿಯಲ್ಲಿ ನಿಗದಿಪಡಿಸಿರುವ ಅರ್ಹತೆಗೆ ಅನುಕ್ರಮವಾಗಿ ತಯಾರಿಸತಕ್ಕದ್ದು.

(ಈ) ಆಯ್ಕೆ ಪ್ರಾಧಿಕಾರ ನಂತರ, ಪ್ರತಿಯೊಂದು ವರ್ಗದ ಹುದ್ದೆಗಳಿಗೂ ನೇಮಕಾತಿಗಾಗಿ ಆಯ್ಕೆ ಮಾಡಿರುವ ಅಭ್ಯರ್ಥಿಗಳ ಒಂದು ಅಂತಿಮ ಯಾದಿ (ಇದನ್ನು ಮುಖ್ಯ ಯಾದಿಯೆಂದು ಹೆಸರಿಸಬಹುದಾಗಿದೆ) ಯನ್ನು ಎರಡನೇ ಯಾದಿ ಮತ್ತು ಮೂರನೇ ಯಾದಿಯಲ್ಲಿ ಒಳಗೊಂಡಿರುವ ಅಭ್ಯರ್ಥಿಗಳ ಹೆಸರುಗಳನ್ನು ಅರ್ಹತೆಯ ಆಧಾರದ ಮೇಲೆ ಜೋಡಿಸಿ ತಯಾರಿಸತಕ್ಕದ್ದು.

(ಉ) ನೇಮಕಾತಿ ನಿಯಮಗಳನ್ವಯ ಎಲ್ಲಿ ಒಂದು ಹೆಚ್ಚುವರಿ ಪಟ್ಟಿಯನ್ನು ತಯಾರಿಸಬೇಕಾಗಿದೆಯೋ ಅಂಥೆಡೆಗಳಲ್ಲಿ ಆಯ್ಕೆ ಪ್ರಾಧಿಕಾರ ಈ ಹೆಚ್ಚುವರಿ ಪಟ್ಟಿಯನ್ನು ಮೇಲೆ (ಅ) (ಆ) (ಇ) ಮತ್ತು (ಈ) ಯಲ್ಲಿ ಕಾಣಿಸಿರುವ ಕ್ರಮವನ್ನು ಅನುಸರಿಸಿ,

ಮುಖ್ಯ ಯಾದಿಯಲ್ಲಿ ಸೇರಿಸಿರುವ ಹೆಸರುಗಳನ್ನು ಹೊರತುಪಡಿಸಿ ಮೊದಲನೇ ಯಾದಿಯಲ್ಲಿರುವ ಇತರೆ ಹೆಸರುಗಳಿಂದ ತಯಾರಿಸತಕ್ಕದ್ದು.

ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಪಿಟಿಷನ್ ಸಂಖ್ಯೆ 27674/2012 ಸಿ/ಡಬ್ಲ್ಯು/41366/2012 ದಿನಾಂಕ 21.06.2016 ರಲ್ಲಿ ಖಲೀಲ್ ಅಹ್ಮದ್ ಕೆ.ಪಿ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು ಇದರಲ್ಲಿ ಈ ರೀತಿ ಹೇಳಲಾಗಿದೆ:–

"135. (ಎ) ಖಂಡದಲ್ಲಿ ಉಪಬಂಧಿಸಲಾದಂತೆ ಪರೀಕ್ಷಾ ಸ್ಕೀಮ್‌ನಲ್ಲಿ ಗಮನಿಸಬಹುದಾದಂತೆ ಮುಖ್ಯ ಪರೀಕ್ಷೆಗೆ ಪ್ರವೇಶ ನೀಡಬೇಕಾದ ಅಭ್ಯರ್ಥಿಗಳ ಸಂಖ್ಯೆಯು ಪೂರ್ವಭಾವಿ ಪರೀಕ್ಷೆಯಲ್ಲಿನ ನಿರ್ವಹಣೆಯ ಆಧಾರದ ಮೇಲೆ, ಮೆರಿಟ್ ಕ್ರಮಾನುಸಾರವಾಗಿ ನೇಮಕಾತಿಗಾಗಿ ಅಧಿಸೂಚಿಸಿದ ಖಾಲಿ ಸ್ಥಾನಗಳ 20ರಷ್ಟಿರತಕ್ಕದ್ದು ಮತ್ತು ಇದು ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಇತರ ಹಿಂದುಳಿದ ವರ್ಗಗಳು ಮತ್ತು ಇತರರು ಇದರಲ್ಲಿ ಪ್ರತಿಯೊಬ್ಬರ ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳ ತಕ್ಕಷ್ಟು ಸಂಖ್ಯೆಯಲ್ಲಿ ಅದೇ ಅನುಪಾತವನ್ನು ಸರಿಹೊಂದಿಸುವುದಕ್ಕೆ ಒಳಪಟ್ಟಿರತಕ್ಕದ್ದು. "ಅದೇ ಅನುಪಾತ" ಎಂದು ಬಳಕೆಯಾಗಿರುವ ಪದ ಎಂದರೆ, ಮುಖ್ಯ ಪರೀಕ್ಷೆಗೆ ಪ್ರವೇಶ ನೀಡಬೇಕಾದ ಅಭ್ಯರ್ಥಿಗಳ ಸಂಖ್ಯೆಯು ಅದೇ ಅನುಪಾತದಲ್ಲಿರತಕ್ಕದ್ದು ಎಂದರೆ, ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಹಿಂದುಳಿದ ವರ್ಗಗಳು ಮತ್ತು ಇತರರಿಗೆ ಸೇರಿದ ಒಬ್ಬೊಬ್ಬರು ಇದಕ್ಕೆ ಸೇರಿದ ಅಭ್ಯರ್ಥಿಗಳ ಸಂಖ್ಯೆಯು ಸದರಿ ಪ್ರವರ್ಗಕ್ಕೆ ಸೇರದಿರುವ ಅಭ್ಯರ್ಥಿಗಳ ಸಂಖ್ಯೆಗೆ ಸಮನಾಗಿರತಕ್ಕದ್ದು. ಅಭ್ಯರ್ಥಿಗಳ ತಕ್ಕಷ್ಟು ಸಂಖ್ಯೆ ಎಂಬ ಪದವನ್ನು ಬಳಸಲಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಲಿಖಿತ ಪರೀಕ್ಷೆಗೆ ಪ್ರವೇಶ ನೀಡಲಾದ ಮೀಸಲಾತಿ ಇಲ್ಲದ ಪ್ರವರ್ಗಕ್ಕೆ ಸೇರಿರುವ ಅಭ್ಯರ್ಥಿಗಳ ಸಂಖ್ಯೆ ಮತ್ತು ಮೀಸಲಾತಿಗೆ ಪ್ರವೇಶ ನೀಡತಕ್ಕ ಮೀಸಲಾತಿ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಗಳ ಸಂಖ್ಯೆಯು ಒಂದೇ ಆಗಿರತಕ್ಕದ್ದು. ಆದುದರಿಂದ ಎರಡು ಪಟ್ಟಿಗಳನ್ನು, ಎಂದರೆ, ಮೀಸಲಾತಿ ಇಲ್ಲದ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಗಳನ್ನು ತೋರಿಸುವ ಒಂದು ಪಟ್ಟಿ ಮತ್ತು ಮೀಸಲಾತಿ ಪ್ರವರ್ಗವನ್ನು ತೋರಿಸುವ ಎರಡನೇ ಪಟ್ಟಿಯನ್ನು ಸಿದ್ಧಪಡಿಸಬೇಕಾಗುತ್ತದೆ. ಈ ಎರಡೂ ಪಟ್ಟಿಗಳನ್ನು ಸಿದ್ಧಪಡಿಸುವಾಗ ಹೆಚ್ಚು ಮಟ್ಟದಲ್ಲಿರುವ (intense) ಮೆರಿಟ್ ಅನ್ನು ಪರಿಗಣಿಸಬೇಕಾಗಿಲ್ಲ. ಈ ಪಟ್ಟಿಗಳು ಲಿಖಿತ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾದ ಅಭ್ಯರ್ಥಿಗಳ ಪಟ್ಟಿಯಾಗಿರುತ್ತದೆ ಮತ್ತು ದಿನಾಂಕ 03.05.1994ರ ಸರ್ಕಾರದ ಆದೇಶದಲ್ಲಿ ಮೊದಲನೇ ಪಟ್ಟಿ ಎಂದು ಕರೆಯಲಾಗುವ ಮೆರಿಟ್ ಕ್ರಮಾನುಸಾರದಲ್ಲಿ ನೇಮಕಾತಿಗೆ ಯುಕ್ತವಾಗಿರುವ ಅಭ್ಯರ್ಥಿಗಳ ಪಟ್ಟಿಯಾಗಿರುವುದಿಲ್ಲ. ಹಾಗೆಯೇ, ಲಿಖಿತ ಪರೀಕ್ಷೆಯ ತರುವಾಯ ಸದರಿ ಯಶಸ್ವಿ ಅಭ್ಯರ್ಥಿಗಳನ್ನು ವ್ಯಕ್ತಿತ್ವ ಪರೀಕ್ಷೆಗೆ ಕರೆಯುವಾಗ ಕೂಡಾ, ಅದೇ ಕಾರ್ಯವಿಧಾನವನ್ನು ಅನುಸರಿಸಬೇಕಾಗುತ್ತದೆ ಎಂದರೆ 2 ಪಟ್ಟಿಗಳನ್ನು ಎಂದರೆ, ಮೆರಿಟ್ ಕ್ರಮಾನುಸಾರದಲ್ಲಿ, ಮೀಸಲಾತಿ ಇಲ್ಲದ ಅಭ್ಯರ್ಥಿಗಳ ಒಂದು ಪಟ್ಟಿ ಮತ್ತು ಮೀಸಲಾತಿ ಅಭ್ಯರ್ಥಿಗಳ ಒಂದು ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು. ಈ ಎರಡು ಪಟ್ಟಿಗಳು ವ್ಯಕ್ತಿತ್ವ ಪರೀಕ್ಷೆಗಾಗಿ ಕರೆಯಬೇಕಾದ ಅರ್ಹ ಅಭ್ಯರ್ಥಿಗಳ ಪಟ್ಟಿಯಾಗಿರುತ್ತದೆ. ಇದು ನೇಮಕಾತಿಗೆ ಯುಕ್ತ ಅಭ್ಯರ್ಥಿಗಳ ಪಟ್ಟಿಯಾಗಿರುವುದಿಲ್ಲ. ವ್ಯಕ್ತಿತ್ವ ಪರೀಕ್ಷೆಯ ನಂತರವಷ್ಟೇ, ಲಿಖಿತ ಪರೀಕ್ಷೆಯಲ್ಲಿ ಮತ್ತು ವ್ಯಕ್ತಿತ್ವ ಪರೀಕ್ಷೆಯಲ್ಲಿ ಪ್ರತಿಯೊಬ್ಬ ಅಭ್ಯರ್ಥಿಯು ಪಡೆದ ಅಂಕಗಳನ್ನು ಕೂಡಿಕೊಂಡು ಮತ್ತು ಅವರ ಜಾತಿ, ಪಂಗಡ, ವರ್ಗಗಳನ್ನು ಗಣನೆಗೆ ತೆಗೆದುಕೊಳ್ಳದೆ ಅರ್ಹ ಅಭ್ಯರ್ಥಿಗಳ ಕ್ರೋಢೀಕೃತ ಪಟ್ಟಿಯನ್ನು ಸಿದ್ಧಪಡಿಸಲಾಗುವುದು. ನಿಯಮ 11ರ ಅಡಿಯಲ್ಲಿರುವಂತೆ, ನಿಯಮ 11ರ ಪದಾವಳಿಗಳಿಂದ ಸ್ಪಷ್ಟವಾಗುವುದೇನೆಂದರೆ ಸದರಿ ಸರ್ಕಾರಿ ಆದೇಶವನ್ನು ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸುವ ಹಂತದಲ್ಲಿ ಮಾತ್ರ ಅನುಸರಿಸಬೇಕಾಗಿರುತ್ತದೆ. ಲಿಖಿತ ಪರೀಕ್ಷೆಗೆ ಅಭ್ಯರ್ಥಿಗಳಿಗೆ ಪ್ರವೇಶ ನೀಡುವ ಸಮಯದಲ್ಲಿ ಮತ್ತು ವ್ಯಕ್ತಿತ್ವ ಪರೀಕ್ಷೆಗೆ ಅಭ್ಯರ್ಥಿಗಳನ್ನು ಆಹ್ವಾನಿಸುವ ಸಮಯದಲ್ಲಿ ಮೀಸಲು ವರ್ಗಗಳಿಗೆ ಸೇರಿರುವ ಮತ್ತು ಮೀಸಲಿರಿಸದಿರುವ ವರ್ಗಕ್ಕೆ ಸೇರಿರುವ ವ್ಯಕ್ತಿಗಳ ಅನುಪಾತವು ಒಂದೇ ಇರತಕ್ಕದ್ದು. (ಎ) ಮತ್ತು (ಸಿ) ಖಂಡಗಳು ನಿರ್ದಿಷ್ಟವಾಗಿ "ಅದೇ ಅನುಪಾತ" ಎಂಬ ಪದವನ್ನು ಉಲ್ಲೇಖಿಸುತ್ತದೆ. ಆದ್ದರಿಂದ, ಆ ಹಂತದಲ್ಲಿ ಮೀಸಲಿರಿಸಿರುವ ವರ್ಗದ ಯಾವುದೇ ಯೋಗ್ಯ (meritorious) ಅಭ್ಯರ್ಥಿಯನ್ನು ಲಿಖಿತ ಪರೀಕ್ಷೆಗೆ ಅಥವಾ ವ್ಯಕ್ತತ್ವ ಪರೀಕ್ಷೆಗೆ ಮೀಸಲಿರಿಸದಿರುವ ವರ್ಗವಾಗಿ ಆಹ್ವಾನಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಈ ಸರ್ಕಾರಿ ಆದೇಶಗಳನ್ನು ತಪ್ಪಾಗಿ ಅನ್ವಯಿಸುವ ಮೂಲಕ ಈ ಎರಡು ಹಂತಗಳಲ್ಲಿ ಮೀಸಲಿರಿಸದಿರುವ ವರ್ಗದ ಯೋಗ್ಯರಾಗಿರುವ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಗೆ ಹಾಗೂ ವ್ಯಕ್ತಿತ್ವ ಪರೀಕ್ಷೆಗೆ ಆಹ್ವಾನಿಸುವ ಅವಕಾಶದಿಂದ ನಿರಾಕರಿಸಲಾಗಿದೆ. 1:20 ಮತ್ತು 1:5 ಅನುಪಾತದಲ್ಲಿ ಕೈಗೊಳ್ಳಲಾದ ವಿಧಾನವು ಲಿಖಿತ ಪರೀಕ್ಷೆಗೆ ಪ್ರವೇಶ ನೀಡಬೇಕಾದ ಹಾಗೂ ವ್ಯಕ್ತಿತ್ವ ಪರೀಕ್ಷೆಗೆ ಆಹ್ವಾನಿಸಬೇಕಾದ ಅಭ್ಯರ್ಥಿಗಳ ಪಟ್ಟಿಯನ್ನು ಹೇಗೆ ರೂಪಿಸಬೇಕೆಂಬ ಸ್ಪಷ್ಟ ಉಪಬಂಧದ ಹಿನ್ನಲೆಯಲ್ಲಿ 1997ರ ನಿಯಮಗಳನ್ನು ಕರ್ನಾಟಕ ಲೋಕಸೇವಾ ಆಯೋಗವು ಅರ್ಥೈಸಲಾಗಿರುವುದು ತಪ್ಪಾಗಿದ್ದು ಆದರೆ ಅದು ಹಾಗೆ ಉಪಬಂಧಿಸಿರುವುದಿಲ್ಲ. ಆದ್ದರಿಂದ ಲೋಪವು ಸ್ಪಷ್ಟವಾಗಿದೆ.

xx xx xx

167. ಮೀಸಲು ವರ್ಗಗಳಿಗೆ ಸೇರಿರುವ ಸದಸ್ಯರು ಮುಕ್ತ ಸ್ಪರ್ಧೆಯಲ್ಲಿ ಅವರ ಸ್ವಂತ ಮೆರಿಟ್‌ನ ಆಧಾರದ ಮೇಲೆ ಸಾಮಾನ್ಯ ಪಟ್ಟಿ/ಮೀಸಲಿರಿಸದಿರುವ ವರ್ಗದಲ್ಲಿ ಸೇರಿಕೊಳ್ಳಬೇಕಾಗಿರುವ ಮತ್ತು ಅನುಸೂಚಿತ ಜಾತಿಗೆ ಮೀಸಲಿರಿಸಿದ ಕೋಟಾದಲ್ಲಿ ಪರಿಗಣಿಸದಿರುವ ಹಕ್ಕನ್ನು ಹೊಂದಿರುವವರೆಂಬ ತತ್ವವು ಈಗ ಹೆಚ್ಚಾಗಿ ಬೇರೂರಿದೆ. ಮುಕ್ತ ವರ್ಗದ ಅಭ್ಯರ್ಥಿಗಳಿಗಿಂತ ಹೆಚ್ಚು ಯೋಗ್ಯರೆಂದು ನಿರ್ಣಯಿಸಲಾದ ಮೀಸಲು ವರ್ಗದ ಅಭ್ಯರ್ಥಿಯು ನಿರ್ದಿಷ್ಟವಾದ ಸೇವೆ/ವೃಂದ/ಹುದ್ದೆಯನ್ನು ಆತನ ಆಯ್ಕೆ/ಆದ್ಯತೆಯನುಸಾರವಾಗಿ ಆರಿಸಿಕೊಳ್ಳಲು ಹಕ್ಕುಳ್ಳವನಾಗಿರುವನು ಮತ್ತು ಆತನಿಗೆ ಮೀಸಲು ವರ್ಗದಲ್ಲಿ ಆ ವರ್ಗದ ಕಡಿಮೆ ಯೋಗ್ಯತೆಯ ಅಭ್ಯರ್ಥಿಗೆ ಹೆಚ್ಚು ಪ್ರಾಮುಖ್ಯದ ಸೇವೆ/ವೃಂದ/ಹುದ್ದೆಯನ್ನು ಬಿಟ್ಟುಕೊಟ್ಟು ಕೆಳಮಟ್ಟದ ಹುದ್ದೆಗೆ ನೇಮಕಾತಿಯನ್ನು ಪಡೆಯಲು ನಿರ್ಬಂಧಿಸುವಂತಿಲ್ಲ.

xx xx xx

169. ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಸೇವಾ ಆಯೋಗವು 1998, 1999 ಮತ್ತು 2004ರ ತಂಡಗಳಲ್ಲಿ ಲಿಖಿತ ಪರೀಕ್ಷೆಗೆ ಪ್ರವೇಶ ನೀಡುವಲ್ಲಿ ಹಾಗೂ ವ್ಯಕ್ತಿತ್ವ ಪರೀಕ್ಷೆಗೆ ಆಹ್ವಾನಿಸುವಲ್ಲಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವಾಗ ದಿನಾಂಕ: 03.05.1994 ಮತ್ತು 20.06.1995ರ ಸರ್ಕಾರಿ ಆದೇಶಗಳಲ್ಲಿ ನಿಯಮಿಸಲಾದ ಕಾರ್ಯವಿಧಾನವನ್ನು ಅನುಸರಿಸಿದೆ. ಅದು ಕಾನೂನು ಬಾಹಿರವಾಗಿರುತ್ತದೆ. ಅದು ನಿಯಮಗಳಿಗೆ ವಿರುದ್ಧವಾಗಿರುತ್ತದೆ. ಸದರಿ ಸರ್ಕಾರಿ ಆದೇಶವನ್ನು ವ್ಯಕ್ತಿತ್ವ ಪರೀಕ್ಷೆಯು ಮುಗಿದ ನಂತರ ಮತ್ತು ನಿಯಮ 11ರ ಅಡಿಯಲ್ಲಿ ನೇಮಕಾತಿಗೆ ಅರ್ಹರಿರುವ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವ ಸಮಯದಲ್ಲಿ ಮಾತ್ರ ಅನ್ವಯಿಸಬೇಕಾಗಿರುತ್ತದೆ. ಹೀಗಾಗಿ ಒಪ್ಪಿಕೊಂಡಿರುವಂತೆ ನಿಯಮಗಳಲ್ಲಿ ನಿಯಮಿಸಲಾದ ಅನುಪಾತವನ್ನು ಅನುಸರಿಸಲಾಗಿಲ್ಲ. ಪರಿಣಾಮದ ಸನ್ನಿವೇಶವು ಮೀಸಲಿರಿಸದಿರುವ ವರ್ಗದಿಂದ ಬರುವ ಯೋಗ್ಯರಾದ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಯನ್ನು ತೆಗೆದುಕೊಳ್ಳುವ ಅವಕಾಶದಿಂದ ನಿರಾಕರಿಸಲಾಗಿದೆ ಹಾಗೂ ವ್ಯಕ್ತಿತ್ವ ಪರೀಕ್ಷೆಗೆ ಆಹ್ವಾನಿಸುವುದರಿಂದಲೂ ಸಹ ನಿರಾಕರಿಸಲಾಗಿದೆ. ಇದು ಸಂವಿಧಾನದ ಅನುಚ್ಛೇದ 14 ಮತ್ತು 16(1)ರ ಉಲ್ಲಂಘನೆಯಾಗುವುದು. ಇದು, ಮೇಲೆ ಉಲ್ಲೇಖಿಸಿರುವ ಸರ್ಕಾರದ ಆದೇಶ ಮತ್ತು ನಿಯಮಗಳನ್ನು ಸಹ ಉಲ್ಲಂಘಿಸಿದಂತಾಗಿದೆ, ಆದುದರಿಂದ ಲಿಖಿತ ಪರೀಕ್ಷೆಗೆ ಪ್ರವೇಶಿಸಿದ ಅಭ್ಯರ್ಥಿಗಳ ಪಟ್ಟಿಯನ್ನು ಹಾಗೂ ವ್ಯಕ್ತಿತ್ವ ಪರೀಕ್ಷೆಗೆ ಆಹ್ವಾನಿಸುವ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವಾಗ ಕರ್ನಾಟಕ ಲೋಕಸೇವಾ ಆಯೋಗವು ಅನುಸರಿಸಿದ ಕಾರ್ಯವಿಧಾನವು ಅಸಂವಿಧಾನಿಕ ಮತ್ತು ಮೇಲೆ ಉಲ್ಲೇಖಿಸಿದ ಸರ್ಕಾರಿ ಆದೇಶ ಮತ್ತು ನಿಯಮಗಳಿಗೆ ವಿರುದ್ಧವಾಗಿದೆ ಎಂದು ಹೇಳುವಲ್ಲಿ ನಮಗೆ ಯಾವುದೇ ಸಂಕೋಚವಿರುವುದಿಲ್ಲ.

xx xx xx

164. (2010) 7 ಎಸ್‌ಸಿಸಿ 234ರಲ್ಲಿ ದಾಖಲಿಸಿದ ಭಾರತ ಒಕ್ಕೂಟ ಎಂ. ರಮೇಶ್ ರಾಮ್ ಮತ್ತು ಇತರರು ಪ್ರಕರಣದಲ್ಲಿ, ಹೆಚ್ಚು ಯೋಗ್ಯರಾದ ಮೀಸಲು ಅಭ್ಯರ್ಥಿಗಳು ಸಾಮಾನ್ಯ ವರ್ಗದಿಂದ ಮೀಸಲು ವರ್ಗಕ್ಕೆ ಸ್ಥಳಾಂತರಿಸುವ ಪ್ರಶ್ನೆಯನ್ನು ವ್ಯವಹರಿಸುವ ಅಪೆಕ್ಸ್ ನ್ಯಾಯಾಲಯದ ಸಂವಿಧಾನಿಕ ಪೀಠವು ಈ ಕೆಳಗಿನಂತೆ ಆದೇಶಿಸಿದೆ.

"72. ನಮ್ಮ ಉತ್ತರಗಳ ಒಟ್ಟು ತಾತ್ಪರ್ಯ:

i) ನಿಯಮ 16(2)ರ ಪ್ರಯೋಜನವನ್ನು ಪಡೆಯುವ ಮತ್ತು ಮೀಸಲು ವರ್ಗದಲ್ಲಿ ಹೊಂದಾಣಿಕೆ ಮಾಡಲಾದ ಎಂಆರ್‌ಸಿ ಅಭ್ಯರ್ಥಿಗಳು ಸರಾಸರಿ ಮೀಸಲಾತಿ ಕೋಟಾಗಳಲ್ಲಿ ಲೆಕ್ಕಹಾಕುವ ಉದ್ದೇಶಕ್ಕಾಗಿ ಮೀಸಲು ವರ್ಗದ ಭಾಗವಾಗಿ ಪರಿಗಣಿಸತಕ್ಕದ್ದು. ಸಾಮಾನ್ಯ ವರ್ಗದಲ್ಲಿ ಎಂಆರ್‌ಸಿ ಅಭ್ಯರ್ಥಿಗಳು ಖಾಲಿ ಮಾಡಿದ ಸೀಟುಗಳನ್ನು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ನೀಡಬೇಕಾಗುವುದು.

ii) ನಿಯಮ 16(2)ನ್ನು ನಿರ್ವಹಿಸುವಾಗ, ಎಂಆರ್‌ಸಿ ಅಭ್ಯರ್ಥಿಯ ಮೀಸಲು ಸ್ಥಿತಿಯನ್ನು ರಕ್ಷಿಸಲಾಗಿವುದರಿಂದ ಆತನ/ಅವಳ ಉತ್ತಮ ಸಾಧನೆಯು ಹೆಚ್ಚಿನ ಆದ್ಯತಾ ಸೇವೆಗೆ ಹಂಚಬೇಕಾದ ಅವಕಾಶದಿಂದ ಆತನನ್ನು ನಿರಾಕರಿಸುವಂತಾಗುವುದಿಲ್ಲ.

iii) ನಿಯಮ 16(2)ರ ತಿದ್ದುಪಡಿಯು ಎರಡು ವರ್ಗಗಳ ಅಭ್ಯರ್ಥಿಗಳ ಪರಸ್ಪರ ಮೆರಿಟ್ ಅನ್ನು ಮಾತ್ರ ಪರಿಗಣಿಸುವುದಾಗಿರುತ್ತದೆ. ಅಂದರೆ ಅವರು ನಮೂದಿಸಿದ ಆದ್ಯತೆಗಳನ್ನು ಪರಿಗಣಿಸಿ ಹಲವಾರು ಸಿವಿಲ್ ಸೇವೆಗಳಿಗೆ ಹಂಚಿಕೆಯ ಉದ್ದೇಶಕ್ಕಾಗಿ (ಎ) ಹೆಚ್ಚು ಯೋಗ್ಯವಾದ ಮೀಸಲು ವರ್ಗದ ಅಭ್ಯರ್ಥಿಗಳು (ಬಿ) ಸಂಬಂಧಿತ ಮೀಸಲು ವರ್ಗದ ಕೆಳ ಶ್ರೇಯಾಂಕದ ಅಭ್ಯರ್ಥಿಗಳು

iv) ಯೋಗ್ಯತೆಯನುಸಾರ ಆಯ್ಕೆ ಮಾಡಲಾದ ಮತ್ತು ಸಾಮಾನ್ಯ/ಮೀಸಲಿರಿಸದಿರುವ ವರ್ಗದ ಅಭ್ಯರ್ಥಿಗಳ ಪಟ್ಟಿಯಲ್ಲಿ ಸ್ಥಾನ ಪಡೆದ "ಹಿಂದುಳಿದ ವರ್ಗಗಳು, ಅನುಸೂಚಿತ ಜಾತಿ ಅನುಸೂಚಿತ ಪಂಗಡದ ವರ್ಗಗಳಿಗೆ ಸೇರಿರುವ" ಮೀಸಲು ವರ್ಗದ ಅಭ್ಯರ್ಥಿಗಳು ಸೇವೆಗಳ ಹಂಚಿಕೆಯ ಸಮಯದಲ್ಲಿ ಸಂಬಂಧಪಟ್ಟ ಮೀಸಲು ವರ್ಗಕ್ಕೆ ಸ್ಥಳಾಂತರಗೊಳ್ಳಲು ಆಯ್ಕೆ ಮಾಡಿಕೊಳ್ಳಬೇಕಾಗುವುದು. ನಿಯಮ 16(2)ರಲ್ಲಿ ಗಮನಿಸಿದ ಅಂಥ ಸ್ಥಾಳಾಂತರವು ನಿಯಮ 16(1) ರೊಂದಿಗೆ ಅಥವಾ ಸಂವಿಧಾನದ ಅನುಚ್ಛೇದ 14, 16(4) ಮತ್ತು 334ರೊಂದಿಗೆ ಅಸಂಗತವಾಗುವುದಿಲ್ಲ.

xx xx xx

## ಆದೇಶ

(1) 1998, 1999 ಮತ್ತು 2004ರಲ್ಲಿ ಗೆಜೆಟೆಡ್ ಪ್ರೊಬೇಷನರುಗಳ (ಗ್ರೂಪ್ ಎ ಮತ್ತು ಬಿ ಹುದ್ದೆಗಳು) ಲಿಖಿತ ಪರೀಕ್ಷೆಗೆ ಪ್ರವೇಶ ಪಡೆದ ಅಭ್ಯರ್ಥಿಗಳ ಪಟ್ಟಿಯನ್ನು ಮತ್ತು ವ್ಯಕ್ತಿತ್ವ ಪರೀಕ್ಷೆಗೆ ಆಹ್ವಾನಿಸಲಾದ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ಅನುಸರಿಸಿದ ಕಾರ್ಯವಿಧಾನವು ಅಸಂವಿಧಾನಿಕವಾಗಿದ್ದು, ಸರ್ಕಾರಿ ಆದೇಶಗಳು ಮತ್ತು ನಿಯಮಗಳಿಗೆ ವಿರುದ್ಧವಾಗಿದೆ.

ಆದಾಗ್ಯೂ, ಈ ಆಧಾರದ ಮೇಲೆ 1998, 1999 ಮತ್ತು 2004ರ ಬ್ಯಾಚುಗಳ ಒಟ್ಟಾರೆ ಆಯ್ಕೆಯನ್ನು ತಳ್ಳಿಹಾಕುವಂತಿಲ್ಲ.

ದೋಷಪೂರಿತ/ಅನರ್ಹ ಅಭ್ಯರ್ಥಿಗಳನ್ನು ಪ್ರತ್ಯೇಖವಾಗಿಸುವುದು ಸಾಧ್ಯವಿದೆ. ಕರ್ನಾಟಕ ಲೋಕಸೇವಾ ಆಯೋಗವು ಅನರ್ಹ ಅಭ್ಯರ್ಥಿಗಳನ್ನು ಪ್ರತ್ಯೇಖಿಸಲು ಈ ಮುಂದಿನ ಕ್ರಮವನ್ನು ಕೈಗೊಳ್ಳತಕ್ಕದ್ದು;

(ಎ) ಕರ್ನಾಟಕ ಲೋಕಸೇವಾ ಆಯೋಗವು ಲಿಖಿತ ಪರೀಕ್ಷೆಯನ್ನು ತೆಗೆದುಕೊಂಡ ಮೀಸಲು ವರ್ಗಕ್ಕೆ ಸೇರಿರುವ ಅಭ್ಯರ್ಥಿಗಳ ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೆರಿಟ್ ಕ್ರಮಾನುಸಾರವಾಗಿ ಪ್ರತ್ಯೇಕ ಪಟ್ಟಿಯನ್ನು ತಯಾರಿಸತಕ್ಕದ್ದು.

(ಬಿ) ಸಿದ್ದಪಡಿಸಲಾದ ಹೆಸರುಗಳ ಸದರಿ ಪಟ್ಟಿಯಿಂದ ವ್ಯಕ್ತಿತ್ವ ಪರೀಕ್ಷೆಗೆ ಆಹ್ವಾನಿಸಬೇಕಾದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು 1:5 ಅನುಪಾತದಲ್ಲಿ ಸಿದ್ದಪಡಿಸುವುದು, ಎಂದರೆ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಮೀಸಲು ಹುದ್ದೆಗಳ ಪೈಕಿ ಪ್ರತಿಯೊಂದು ವರ್ಗಕ್ಕಾಗಿ ಮೀಸಲಿರಿಸಿದ ಖಾಲಿ ಇರುವ ಸ್ಥಾನಗಳ ಸಂಖ್ಯೆಯ ಐದರಷ್ಟಂತೆ ಅಭ್ಯರ್ಥಿಗಳ ಸಂಖ್ಯೆಯು ಇರತಕ್ಕದ್ದು.

(ಸಿ) ಮೀಸಲು ವರ್ಗಕ್ಕೆ ಸೇರಿದ ಆಯ್ಕೆಯಾದ ಅಭ್ಯರ್ಥಿಗಳ ಹೆಸರುಗಳು ಸಾಮಾನ್ಯ ವರ್ಗವಾಗಿ ಅಥವಾ ಮೀಸಲು ವರ್ಗವಾಗಿ ಈ ಪಟ್ಟಿಯಲ್ಲಿ ಕಾಣಿಸಿಕೊಂಡರೆ, ಆಗ ಅವರ ನೇಮಕಾತಿಯು ಸಿಂಧುವಾಗಿರತಕ್ಕದ್ದು ಹಾಗೂ ಅದನ್ನು ಅಡ್ಡಿಗೊಳಿಸತಕ್ಕದ್ದಲ್ಲ.

(ಡಿ) ಆಯ್ಕೆಯಾದ ಅಭ್ಯರ್ಥಿಗಳ ಹೆಸರುಗಳು ಈ ಪಟ್ಟಿಯಲ್ಲಿ ಕಾಣಿಸಿಕೊಳ್ಳದಿದ್ದರೆ, ಆಗ ಅವರ ನೇಮಕಾತಿಯು ಅನೂರ್ಜಿತಗೊಳ್ಳುವುದು ಹಾಗೂ ಅದನ್ನು ಈ ಮೂಲಕ ತಳ್ಳಿ ಹಾಕುವುದು.

(ಇ) ಕರ್ನಾಟಕ ಲೋಕಸೇವಾ ಆಯೋಗವು ಈ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳುಗಳ ಒಳಗೆ ಈ ಕ್ರಮವನ್ನು ಕೈಗೊಳ್ಳತಕ್ಕದ್ದು ಹಾಗೂ ಅದನ್ನು ಸೂಕ್ತ ಆದೇಶಗಳನ್ನು ಹೊರಡಿಸಲು ಸರ್ಕಾರಕ್ಕೆ ಕಳುಹಿಸತಕ್ಕದ್ದು.

(2) ರಿಟ್ ಪಿಟಿಷನ್ ಸಂ: 12548-589/2002ರಲ್ಲಿನ 11ನೇ ಅಕ್ಟೋಬರ್ 2002 ದಿನಾಂಕದ ಆದೇಶದ ಮೂಲಕ ಕರ್ನಾಟಕ ಲೋಕಸೇವಾ ಆಯೋಗವು ತಯಾರಿಸಿದ ಪರಿಷ್ಕೃತ ಪಟ್ಟಿಯನ್ನು ಅಪೆಕ್ಸ್ ನ್ಯಾಯಾಲಯವು ಸಿವಿಲ್ ಅಪೀಲು ಸಂ: 6172-6222/2005ರಲ್ಲಿ 6ನೇ ಅಕ್ಟೋಬರ್ 2005 ದಿನಾಂಕದ ಆದೇಶದ ಮುಖೇನ ದೃಢೀಕರಿಸಿದೆ, ಅದನ್ನು ಕರ್ನಾಟಕ ಲೋಕಸೇವಾ ಆಯೋಗವು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿ ಈ ನ್ಯಾಯಾಲಯದ ದಿನಾಂಕ: 11.11.2014ರ ಆದೇಶದ ಕಾರಣದಿಂದಾಗಿ ಅದನ್ನು ಜಾಲತಾಣದಲ್ಲಿ ಪ್ರಕಟಿಸಲಾಗಿದ್ದು ಅದನ್ನು ಎತ್ತಿಹಿಡಿಯಲಾಗಿದೆ. ಕರ್ನಾಟಕ ಲೋಕಸೇವಾ ಆಯೋಗವು ಮತ್ತು ರಾಜ್ಯ ಸರ್ಕಾರವು ಸದರಿ ಪಟ್ಟಿಯನ್ನು ಜಾರಿಗೊಳಿಸತಕ್ಕದ್ದು.

ಮಾನ್ಯ ಸರ್ವೋಚ್ಛ ನ್ಯಾಯಾಲಯವು ಎಸ್‌ಎಲ್‌ಪಿ ಸಂ: 29245/2016ರ ಗೋಪಾಲಕೃಷ್ಣ ಎನ್ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು ಪ್ರಕರಣದಲ್ಲಿ ಮೇಲಿನ ಉಚ್ಚನ್ಯಾಯಾಲಯದ ತೀರ್ಪನ್ನು ಸರ್ವೋಚ್ಛ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ ದಿನಾಂಕ 11.04.2018ರಲ್ಲಿ ಈ ಮುಂದಿನಂತೆ ಹೇಳಲಾಗಿರುವುದರಿಂದ,-

"ವಕೀಲರ ಅಹವಾಲನ್ನು ಆಲಿಸಿದ ಮೇಲೆ ನ್ಯಾಯಾಲಯವು ಈ ಮುಂದಿನ

ಆದೇಶವನ್ನು ಮಾಡಿದೆ. ಪಕ್ಷಕಾರರ ಪರವಾಗಿನ ವಕೀಲರನ್ನು ಆಲಿಸಿದೆ.

ವಿಳಂಬವನ್ನು ಮನ್ನಿಸಿದೆ.

ಪ್ರಶ್ನಿತ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಆದಾರಗಳು ಕಂಡುಬರುವುದಿಲ್ಲ. ಅದರಂತೆ ವಿಶೇಷ ಅನುಮತಿ ಅರ್ಜಿಯನ್ನು ವಜಾಗೊಳಿಸಿದೆ.

ಯಾವುದೇ ಅರ್ಜಿ(ಗಳು) ಬಾಕಿಯಿದ್ದಲ್ಲಿ, ಅವುಗಳನ್ನೂ ಸಹ ವಿಲೇ ಮಾಡತಕ್ಕದ್ದು."

ಮಾನ್ಯ ಸರ್ವೋಚ್ಛ ನ್ಯಾಯಾಲಯದ ಜಿತೇಂದ್ರ ಕುಮಾರ್ ಸಿಂಗ್ ಮತ್ತು ಎಎನ್‌ಆರ್ ವಿರುದ್ಧ ಉತ್ತರ ಪ್ರದೇಶ ರಾಜ್ಯ ಮತ್ತು ಇತರರು ಸಿ.ಎ ಸಂ: 74/2010ರಲ್ಲಿ 08.01.2010ರಲ್ಲಿ ಈ ಮುಂದಿನಂತೆ ಹೇಳಿರುವುದರಿಂದ,-

"52. ಮೇಲಿನ ಹಿನ್ನೆಲೆಯಲ್ಲಿ ಮೀಸಲು ವರ್ಗದ ಅಭ್ಯರ್ಥಿಗಳಿಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳೊಂದಿಗೆ ಸ್ಪರ್ಧಿಸಲು ವಯೋಮಿತಿ ಸಡಿಲಿಕೆಯೊಂದೇ ಸಾಧುವಾಗಿದ್ದು, ಉಳಿದೆಲ್ಲ ಅಂಶಗಳೂ ಸಮಾನವಾಗಿವೆ ಎಂಬುದು ಸಾಕಷ್ಟು ಸ್ಪಷ್ಟವಾಗುತ್ತಿದೆ. ರಾಜ್ಯವು ವಯಸ್ಸು ಮತ್ತು ಶುಲ್ಕದಲ್ಲಿನ ಸಡಿಲಿಕೆಯನ್ನು ಆಯ್ಕೆ ಪರೀಕ್ಷೆ ಅಂದರೆ, ಸಂದರ್ಶನದ ಜೊತೆಗಿರುವ ಮುಖ್ಯ ಲಿಖಿತ ಪರೀಕ್ಷೆಯಲ್ಲಿ, ಅಭ್ಯರ್ಥಿಯ ಮೆರಿಟ್‌ನ ಆಧಾರದ ಮೇಲೆ ಆಯ್ಕೆ ಮಾದರಿಯಲ್ಲಿನ ಸಡಿಲಿಕೆಯಂತೆ ಮಾಡಿರುವುದಿಲ್ಲ. ಆದ್ದರಿಂದ ಅಂಥ ಸಡಿಲಿಕೆಗಳು, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿನ ಯೋಗ್ಯತೆಯ ಆಧಾರದ ಮೇಲೆ ಮೀಸಲು ವರ್ಗದ ಅಭ್ಯರ್ಥಿಯು ಸಾಮಾನ್ಯ ವರ್ಗದ ಅಭ್ಯರ್ಥಿಯಾಗಿ ಪರಿಗಣಿಸಬೇಕಾದ ಹಕ್ಕಿನಿಂದ ವಂಚಿತನಾಗುವಂತಿಲ್ಲ."

ಮುಖ್ಯ ಸ್ಪರ್ಧಾತ್ಮಕ ಪರೀಕ್ಷೆ, ವ್ಯಕ್ತಿತ್ವ ಪರೀಕ್ಷೆ ಮತ್ತು ಅಂತಿಮ ಹಾಗೂ ಹೆಚ್ಚುವರಿ ಪಟ್ಟಿಗಳನ್ನು ಸಿದ್ದಪಡಿಸುವ ವಿಧಾನದ ಉದ್ದೇಶಕ್ಕಾಗಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ದಪಡಿಸಲು ಸ್ಪಷ್ಟೀಕರಣ ನೀಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಿವಿಲ್ ಸೇವೆಗಳ (ನೇಮಕಾತಿ ಸಮಯದಲ್ಲಿ ಅಭ್ಯರ್ಥಿಗಳ ಆಯ್ಕೆಯ ಕಾರ್ಯವಿಧಾನ) ಅಧಿನಿಯಮ, 2018 ಎಂದು ಕರೆಯತಕ್ಕದ್ದು.

(2) ಇದು 1994ರ ಮೇ 3ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಸ್ಪರ್ಧಾತ್ಮಕ ಮುಖ್ಯ ಪರೀಕ್ಷೆ, ಪೂರ್ವಭಾವಿ ಪರೀಕ್ಷೆ, ಅಂತಿಮ ಆಯ್ಕೆ ಪಟ್ಟಿ ಮತ್ತು ಹೆಚ್ಚುವರಿ ಪಟ್ಟಿಗಳಿಗಾಗಿ ಅಭ್ಯರ್ಥಿಗಳ ಆಯ್ಕೆಯ ಕಾರ್ಯವಿಧಾನ.–** ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ರಲ್ಲಿ (1990ರ ಕರ್ನಾಟಕ ಅಧಿನಿಯಮ 14) ರಾಜ್ಯದಲ್ಲಿಯ ಯಾವುದೇ ಸೇವೆ ಅಥವಾ ಹುದ್ದೆಯ ನೇಮಕಾತಿ ಮತ್ತು ಆಯ್ಕೆಯ ವಿಧಾನಕ್ಕೆ ಸಂಬಂಧಿಸಿದಂತೆ ಮತ್ತು ಅದರ ಅಡಿಯಲ್ಲಿ ರಚಿಸಿದ ಅಥವಾ ರಚಿಸಲಾಗಿದೆಯೆಂದು ಭಾವಿಸಲಾದ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಪ್ರತಿಯೊಂದು ಆಯ್ಕೆ ಪ್ರಾಧಿಕಾರವು,–

(i) ಸ್ಪರ್ಧಾತ್ಮಕ ಮುಖ್ಯಪರೀಕ್ಷೆಗೆ ನಿಯಮಿಸಲಾದ ಅನುಪಾತದಲ್ಲಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸುವಲ್ಲಿ; ಅಥವಾ

(ii) ವ್ಯಕ್ತಿತ್ವ ಪರೀಕ್ಷೆಗೆ ನಿಯಮಿಸಲಾದ ಅನುಪಾತದಲ್ಲಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸುವಲ್ಲಿ,

– ಅಭ್ಯರ್ಥಿಗಳನ್ನು ಯಾವ ಅನುಪಾತದಲ್ಲಿ ಕರೆಯಬೇಕಾಗಿದೆಯೋ ಆ ರೀತಿಯಲ್ಲಿ ಈ ಕೆಳಕಂಡ ಕಾರ್ಯವಿಧಾನದಲ್ಲಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು, ಎಂದರೆ:–

(ಎ) ಸಂಬಂಧಪಟ್ಟ ಆಯ್ಕೆ ಪ್ರಾಧಿಕಾರವು, ಎಲ್ಲಾ ಅರ್ಹ ಅರ್ಜಿದಾರರ ಜಾತಿ, ಪಂಗಡ, ವರ್ಗ ಇವುಗಳನ್ನು ಗಣನೆಗೆ ತೆಗೆದುಕೊಳ್ಳದೆ ಅವರ ಕ್ರೋಢೀಕೃತ ಪಟ್ಟಿಯನ್ನು ಮೊದಲು ಸಿದ್ಧಪಡಿಸತಕ್ಕದ್ದು ಮತ್ತು ಅವರ ಜಾತಿ, ಪಂಗಡ, ವರ್ಗ ಇವುಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಮೆರಿಟ್ ಕ್ರಮಾನುಸಾರವಾಗಿ ಜೋಡಿಸತಕ್ಕದ್ದು (ಇಲ್ಲಿ ಇನ್ನು ಮುಂದೆ ಮೊದಲನೇ ಪಟ್ಟಿ ಎಂದು ಕರೆಯಲಾಗುವುದು).

(ಬಿ) ಆಯ್ಕೆ ಪ್ರಾಧಿಕಾರವು, ತರುವಾಯ, ಮೊದಲನೇ ಪಟ್ಟಿಯಿಂದ, ಅವರ ಜಾತಿ, ಪಂಗಡ, ವರ್ಗ ಇವುಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಸಾಮಾನ್ಯ ಮೆರಿಟ್ ಆಧಾರದ ಮೇಲೆ ಭರ್ತಿ ಮಾಡಬೇಕಾದ ಹುದ್ದೆಗಳ ಸಂಬಂಧದಲ್ಲಿ ನಿಯಮಿಸಲಾದ ಅನುಪಾತದಲ್ಲಿ ಕರೆಯಲು ಅಗತ್ಯವಿರುವ ಅಭ್ಯರ್ಥಿಗಳಿಗೆ ಸಮನಾದ ಸಂಖ್ಯೆಯ (ಎಂದರೆ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದವುಗಳನ್ನು ಹೊರತುಪಡಿಸಿ ಹುದ್ದೆಗಳ ಸಂಖ್ಯೆ) ಅರ್ಜಿದಾರರ ಹೆಸರುಗಳನ್ನು ಒಳಗೊಂಡಿರುವ, ಮೊದಲನೇ ಪಟ್ಟಿಯಲ್ಲಿಯ ಮೊದಲನೇ ಹೆಸರಿನಿಂದ ಪ್ರಾರಂಭಿಸಿ ಮೆರಿಟ್ ಕ್ರಮಾನುಸಾರವಾಗಿ ಜೋಡಿಸಿ ಎರಡನೇ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು (ಇಲ್ಲಿ ಇನ್ನು ಮುಂದೆ ಎರಡನೇ ಪಟ್ಟಿ ಎಂದು ಕರೆಯಲಾಗುವುದು).

(ಸಿ) ಆಯ್ಕೆ ಪ್ರಾಧಿಕಾರವು, ತರುವಾಯ, ಮೊದಲನೇ ಪಟ್ಟಿಯಿಂದ, ಎರಡನೇ ಪಟ್ಟಿಯಲ್ಲಿ ಒಳಗೊಂಡಿರುವ ಭಾಗವನ್ನು ಹೊರತುಪಡಿಸಿ, ಮೊದಲನೇ ಪಟ್ಟಿಯಲ್ಲಿ ತೀರ್ಮಾನಿಸಿದ ಮೆರಿಟ್ ಕ್ರಮಾನುಸಾರವಾಗಿ ಪ್ರತಿಯೊಂದು ಮೀಸಲು ಪ್ರವರ್ಗಕ್ಕೆ ಮೀಸಲಿರಿಸಿದ ಹುದ್ದೆಯ ಸಂಬಂಧದಲ್ಲಿ ನಿಯಮಿಸಲಾದ ಅನುಪಾತದಲ್ಲಿ ಕರೆಯಲು ಅಗತ್ಯವಿರುವ ಅಭ್ಯರ್ಥಿಗಳ ಸಂಖ್ಯೆಗೆ ಸಮನಾಗಿ, ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿರುವ ಅರ್ಜಿದಾರರ ಹೆಸರುಗಳನ್ನು ಒಳಗೊಂಡ ಮೂರನೇ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು (ಇಲ್ಲಿ ಇನ್ನು ಮುಂದೆ ಮೂರನೇ ಪಟ್ಟಿ ಎಂದು ಕರೆಯಲಾಗುವುದು).

(iii) ನೇಮಕಾತಿಗಾಗಿ ಅಂತಿಮ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸುವಾಗ; ಮತ್ತು

(iv) ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸುವಾಗ,–

(ಎ) ಸಂಬಂಧಪಟ್ಟ ಆಯ್ಕೆ ಪ್ರಾಧಿಕಾರವು, ಎಲ್ಲಾ ಅರ್ಹ ಅರ್ಜಿದಾರರ ಜಾತಿ, ಪಂಗಡ, ವರ್ಗ ಇವುಗಳನ್ನು ಗಣನೆಗೆ ತೆಗೆದುಕೊಳ್ಳದೆ ಅವರ ಕ್ರೋಢೀಕೃತ ಪಟ್ಟಿಯನ್ನು ಮೊದಲು ಸಿದ್ಧಪಡಿಸತಕ್ಕದ್ದು ಮತ್ತು ಅವರ ಜಾತಿ, ಪಂಗಡ, ವರ್ಗ ಇವುಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಮೆರಿಟ್ ಕ್ರಮಾನುಸಾರವಾಗಿ ಜೋಡಿಸತಕ್ಕದ್ದು (ಇಲ್ಲಿ ಇನ್ನು ಮುಂದೆ ಮೊದಲನೇ ಪಟ್ಟಿ ಎಂದು ಕರೆಯಲಾಗುವುದು).

(ಬಿ) ಆಯ್ಕೆ ಪ್ರಾಧಿಕಾರವು, ತರುವಾಯ, ಮೊದಲನೇ ಪಟ್ಟಿಯಿಂದ, ಅವರ ಜಾತಿ, ಪಂಗಡ, ವರ್ಗ ಇವುಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಸಾಮಾನ್ಯ ಮೆರಿಟ್ ಆಧಾರದ ಮೇಲೆ ಭರ್ತಿ ಮಾಡಬೇಕಾದ ಹುದ್ದೆಗಳಿಗೆ ಸಮನಾದ ಸಂಖ್ಯೆಯ (ಎಂದರೆ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದವುಗಳನ್ನು ಹೊರತುಪಡಿಸಿ ಹುದ್ದೆಗಳ ಸಂಖ್ಯೆ) ಅರ್ಜಿದಾರರ ಹೆಸರುಗಳನ್ನು ಒಳಗೊಂಡಿರುವ, ಮೊದಲನೇ ಪಟ್ಟಿಯಲ್ಲಿಯ ಮೊದಲನೇ ಹೆಸರಿನಿಂದ ಪ್ರಾರಂಭಿಸಿ ಮೆರಿಟ್‌ನ ಆಧಾರದಲ್ಲಿ

ಜೋಡಿಸಿ ಎರಡನೇ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು (ಇಲ್ಲಿ ಇನ್ನು ಮುಂದೆ ಎರಡನೇ ಪಟ್ಟಿ ಎಂದು ಕರೆಯಲಾಗುವುದು).

(ಸಿ)ಆಯ್ಕೆ ಪ್ರಾಧಿಕಾರವು, ತರುವಾಯ, ಮೊದಲನೇ ಪಟ್ಟಿಯಿಂದ, ಎರಡನೇ ಪಟ್ಟಿಯಲ್ಲಿ ಒಳಗೊಂಡಿರುವ ಭಾಗವನ್ನು ಹೊರತುಪಡಿಸಿ, ಮೊದಲನೇ ಪಟ್ಟಿಯಲ್ಲಿ ತೀರ್ಮಾನಿಸಿದ ಮೆರಿಟ್ ಆಧಾರದ ಮೇಲೆ, ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿರುವ ಅರ್ಜಿದಾರರ ಹೆಸರುಗಳನ್ನು ಒಳಗೊಂಡಂತೆ, ಪ್ರತಿಯೊಂದು ವರ್ಗಗಳಿಗೆ ಮೀಸಲಿರಿಸಿದ ಹುದ್ದೆಗಳಿಗೆ ಮೀಸಲಿರಿಸಿದ ಖಾಲಿ ಹುದ್ದೆಗಳಿಗೆ ಸಮನಾದ ಸಂಖ್ಯೆಯ ಮೂರನೇ ಪಟ್ಟಿಯನ್ನು ತಯಾರಿಸತಕ್ಕದ್ದು (ಇಲ್ಲಿ ಇನ್ನು ಮುಂದೆ ಮೂರನೇ ಪಟ್ಟಿ ಎಂದು ಕರೆಯಲಾಗುವುದು).

(ಡಿ) ಆಯ್ಕೆ ಪ್ರಾಧಿಕಾರವು, ತರುವಾಯ, ಆಯ್ಕೆ ಮಾಡಲಾದ ಹುದ್ದೆಗಳ ಪ್ರವರ್ಗಗಳಿಗೆ ನೇಮಕಾತಿಗಾಗಿ ಆಯ್ಕೆಯಾದ ಅಭ್ಯರ್ಥಿಗಳನ್ನು, ಎರಡನೇ ಪಟ್ಟಿ ಮತ್ತು ಮೂರನೇ ಪಟ್ಟಿಯಲ್ಲಿ ಒಳಗೊಂಡಿರುವ ಅಭ್ಯರ್ಥಿಗಳ ಹೆಸರುಗಳನ್ನು ಮೆರಿಟ್ ಆಧಾರದ ಮೇಲೆ ಜೋಡಿಸತಕ್ಕದ್ದು.

(ಇ) ನೇಮಕಾತಿ ನಿಯಮಗಳಿಗೆ ಅನುಸಾರವಾಗಿ ಎರಡನೇ ಪಟ್ಟಿಯನ್ನು ಸಿದ್ಧಪಡಿಸಿದ್ದಲ್ಲಿ ಆಯ್ಕೆ ಪ್ರಾಧಿಕಾರವು, ಮೊದಲನೇ ಪಟ್ಟಿಯಿಂದ ಮುಖ್ಯ ಪಟ್ಟಿಯಲ್ಲಿ ಒಳಗೊಂಡಿರುವ ಹೆಸರುಗಳನ್ನು ಹೊರತುಪಡಿಸಿ, ಮೇಲಿನ (ಎ), (ಬಿ), (ಸಿ) ಮತ್ತು (ಡಿ) ಯಲ್ಲಿ ನಮೂದಿಸಲಾದ ವಿಧಾನವನ್ನು ಅಳವಡಿಸಿಕೊಂಡು ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು:

ಪರಂತು, ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳು ಅಥವಾ ಇತರ ಹಿಂದುಳಿದ ವರ್ಗಗಳಿಗೆ ಸೇರಿರುವ ಅಭ್ಯರ್ಥಿಗೆ ಶುಲ್ಕಗಳ, ವಯೋಮಾನದ ವಿನಾಯಿತಿಯನ್ನು ಕಲ್ಪಿಸಿದ್ದರೂ ಅಥವಾ ಇತರ ಸಡಿಲಿಕೆಗಳನ್ನು ನೀಡಲಾಗಿದ್ದರೂ ಸ್ಪರ್ಧಾತ್ಮಕ ಮುಖ್ಯ ಪರೀಕ್ಷೆ, ವ್ಯಕ್ತಿತ್ವ ಪರೀಕ್ಷೆ, ಅಂತಿಮ ಆಯ್ಕೆ ಪಟ್ಟಿ ಅಥವಾ ಹೆಚ್ಚುವರಿ ಆಯ್ಕೆ ಪಟ್ಟಿ ಮುಂತಾದ ಆಯ್ಕೆಯ ಎಲ್ಲಾ ಹಂತಗಳಲ್ಲಿ ಮೆರಿಟ್ ಆಧಾರದ ಮೇಲೆ ಆತನನ್ನು ಸಾಮಾನ್ಯ ವರ್ಗದ ಅಭ್ಯರ್ಥಿ ಎಂದು ಪರಿಗಣಿಸತಕ್ಕದ್ದು.

**3. ಕೈಗೊಂಡ ಕ್ರಮದ ಸಿಂಧುತ್ವ.–** ಈ ಅಧಿನಿಯಮದ 2ನೇ ಪ್ರಕರಣಕ್ಕೆ ವಿರುದ್ಧವಾಗಿ ಯಾವುದೇ ನ್ಯಾಯಾಲಯ, ನ್ಯಾಯಾಧೀಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಮಾನ, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಒಳಗೊಂಡಿದ್ದರೂ, ಮಾಡಲಾದ ನೇಮಕಾತಿ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವನ್ನು ಹೊಂದಿರುವ ಯಾವುದೇ ಆಯ್ಕೆಯ ಸಂಬಂಧದಲ್ಲಿ ಕೈಗೊಂಡ ಅಥವಾ ಮಾಡಿದ ಯಾವುದೇ ಕ್ರಮ ಮತ್ತು ಈ ಅಧಿನಿಯಮದ ಪ್ರಕಟಣೆಯ ಪೂರ್ವದಲ್ಲಿ ಈ ಸಂಬಂಧದಲ್ಲಿ ಹೊರಡಿಸಿದ ಸರ್ಕಾರಿ ಆದೇಶಗಳು ಅಥವಾ ನಿಯಮಗಳ ಅನುಪಾಲನೆಯಲ್ಲಿ 1994ರ ಮೇ 3ರಂದು ಅಥವಾ ತದನಂತರ ಆಯ್ಕೆ ಸಮಿತಿಯು ಕೈಗೊಂಡ ಯಾವುದೇ ಕ್ರಮ ಅಥವಾ ಮಾಡಿದ ಕ್ರಿಯೆಯನ್ನು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅದಕ್ಕೆ ಅನುಸಾರವಾಗಿ ಸ್ಪರ್ಧಾತ್ಮಕ ಮುಖ್ಯ ಪರಿಕ್ಷೆ, ವ್ಯಕ್ತಿತ್ವ ಪರಿಕ್ಷೆ, ಅಂತಿಮ ಪಟ್ಟಿ ಮತ್ತು ಹೆಚ್ಚುವರಿ ಪಟ್ಟಿಗಳಿಗಾಗಿ ಅಭ್ಯರ್ಥಿಗಳ ಆಯ್ಕೆಯ ಸಂಬಂಧದಲ್ಲಿ ಆಯ್ಕೆಗಳನ್ನು ಅಥವಾ ಕ್ರಮಗಳನ್ನು ಅಥವಾ ಕ್ರಿಯೆಗಳನ್ನು ಮಾಡಿದೆ, ಕೈಗೊಂಡಿದೆ ಅಥವಾ ಮಾಡಲಾಗಿದ್ದರೆ ಹೇಗೋ ಹಾಗೆ ಸಿಂಧುವಾಗಿರತಕ್ಕದ್ದು ಮತ್ತು ಅದಕ್ಕನುಸಾರವಾಗಿ,–

(ಎ) ಈ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಾಗಿ ಅಂಥ ಮುಂಬಡ್ತಿಯ ಪುನರೀಕ್ಷಣೆಗಾಗಿ ಯಾವುದೇ ನ್ಯಾಯಾಲಯ ಅಥವಾ ಯಾವುದೇ ನ್ಯಾಯಮಂಡಳಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ದಾವೆ ಅಥವಾ ಇತರ ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ ಅಥವಾ ಮುಂದುವರೆಸತಕ್ಕದ್ದಲ್ಲ; ಮತ್ತು

(ಬಿ) ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಾಗಿ ಅಂಥ ಯಾವುದೇ ಪ್ರಕರಣಗಳ ಪುನರೀಕ್ಷಣೆಗಾಗಿ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಹೊರಡಿಸತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ. ದ್ವಾರಕನಾಥ್ ಬಾಬು**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳ ಇಲಾಖೆ